**IN THE COURT OF II ADDL DISTRCT AND SESSIONS JUDGE, CHIKKAMAGALURU.**

*S.C No.02/2012*

| | |
|---|---|
| Name of the Accused | A.R.ಸುರೇಶ, |
| Father's Name | ರುದ್ರಪ್ಪ E., |
| Age | 36 ವರ್ಷ, |
| Occupation | ವ್ಯವಸಾಯ, |
| Residence | ಅಮೃತಾಪುರ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**ಕಲಂ 313 ಸಿ.ಆರ್ ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ.**

Q.1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರಶ್ನೆ 2ಃ ಪ್ರಾ.ಸಾ.1 ಶ್ರೀ ಲೋಕೇಶ್ ಇವರು ತಮ್ಮ ಸಾಕ್ಷ್ಯದಲ್ಲಿ ಮೂರು ತಿಂಗಳ ಹಿಂದೆ ಸಿ. ಎಂ.ಸಿ ಯ ಪ್ರಭಾಕರ ಇಂಜೀನಿಯವರ್ ರವರು ತನ್ನನ್ನು ಪೋಲೀಸರೊಂದಿಗೆ ಶವವನ್ನು ದಫನ್ ಮಾಡಲಿಕ್ಕೆ ಸಾಗರದ ಸ್ಮಶಾನಕ್ಕೆ ಕಳುಹಿಸಿರುತ್ತಾರೆ, ಆದರಂತೆ ತಾನು ಸ್ಮಶಾನಕ್ಕೆ ಹೋಗಿದ್ದು, ಶವವನ್ನು ಬಟ್ಟೆ ಮತ್ತು ಪ್ಲಾಸ್ಟಿಕ್ ನಲ್ಲಿ ಸುತ್ತಿದ್ದರು, ಪೋಲಿಸರು ತನ್ನ ಸಮಕ್ಷಮ ಸದರಿ ಶವವನ್ನು ದಫನ ಮಾಡಿರುತ್ತಾರೆ ಮತ್ತು ನಿಪಿ 1 ರಂತೆ ಮಹಜರ್ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ ?

ಉತ್ತರಃ ಸುಳ್ಳು

ಪ್ರಶ್ನೆ **3** ಪ್ರಾ. ಸಾ. **2** ಶ್ರೀ ವೆಂಕಪ್ಪಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **05.07.2011** ರಂದು ಮದ್ಯಾಹ್ನ **2** ಗಂಟೆ ಸುಮಾರಿಗೆ ಶಾಲೆಯಿಂದ ತಮ್ಮ

ಊರಿಗೆ ಮರಳಿ ಬರುತಿದ್ದಾಗ, ತಮ್ಮ ಊರಿನ ಕೆರೆಯ ಹತ್ತಿರ ಜನ ಸೇರಿದ್ದರು, ತಾನು ಅಲ್ಲಿಗೆ ಹೋಗಿ ನೋಡಿದ್ದು, ಕೆರೆಯಲ್ಲಿ ನೀರಿನ ಮೇಲೆ ಒಂದು ಮೃತ ದೇಹವು ಮೇಲ್ಮುಖವಾಗಿ ತೇಲುತ್ತಿತ್ತು ಮತ್ತು ಒಂದು ದ್ವಿಚಕ್ರ ವಾಹನವು ನೀರಿನಲ್ಲಿತ್ತು, ಪೋಲಿಸ್ ಠಾಣೆ ನಿಪಿ.2 ರಂತೆ ದೂರನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 4 ಪ್ರಾ ಸಾ. 2 ರವರು ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಪೋಲಿಸರು ಕೆರೆಯ ಹತ್ತಿರ ಬಂದಿದ್ದು, ಮೃತ ದೇಹವನ್ನು ಮತ್ತು ದ್ವಿಚಕ್ರ ವಾಹನವನ್ನು ಕೆರೆಯಿಂದ ತೆಗೆದಿರುತ್ತಾರೆ ಮತ್ತು ಈ ಬಗ್ಗೆ ತಮ್ಮ ಸಮಕ್ಷಮ ನಿಪಿ.3 ರಂತೆ ಮಹಜರ್ ಮಾಡಿರುತ್ತಾರೆ, ಮೃತ ದೇಹವನ್ನು ಪ್ಲಾಸ್ಟಿಕ್ ವೈರನಿಂದ ಕಟ್ಟಿದ್ದರು, ಮೊಪೆಡ್ ನ ಪೋಟೊವನ್ನು ನಿಪಿ.4 ರಂತೆ ತೆಗೆದರು ಮತ್ತು ಮೃತ ದೇಹದ ಪೋಟೋಗಳನ್ನು ನಿಪಿ.5 ರಿಂದ 9 ರಂತೆ ತೆಗೆದಿರುತ್ತಾರೆ, ತಾನು ಯಾರೋ ಒಬ್ಬರು ಹೆಂಗಸನ್ನು ಕೊಲೆ ಮಾಡಿ ಕೆರೆಗೆ ಎಸೆದಿರುತ್ತಾರೆ ಎಂದು ಸಂದೇಹಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 5 ಪ್ರಾ.ಸಾ 3 ಶ್ರೀ ಜಿ ರಾಮು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 05.07.2011 ಸಂಜೆ 4 ಗಂಟೆ ಸುಮಾರಿಗೆ ಮೃತ ದೇಹವನ್ನು ಮತ್ತು ಲೂನಾ ಮೊಪೆಡ್ ಕೆರೆಯಿಂದ ತೆಗೆಯುವ ಸಮಯದಲ್ಲಿ ನಿಪಿ.3 ರಂತೆ ಮಹಜರ್ ಮಾಡಿರುತ್ತಾರೆ, ಅದೇ ದಿನ ನಿಪಿ.10 ರಂತೆ ಮೃತ ದೇಹದ ಶವ ಪಂಚನಾಮೆ ಮಾಡಿರುತ್ತಾರೆ, ಮೃತ ದೇಹವು ಕೊಳೆತಿತ್ತು ಮತ್ತು ಅದರ ಎರಡು ಕೈಗಳು ಪ್ಲಾಸ್ಟಿಕ್ ಹಗ್ಗದಿಂದ ಕಟ್ಟಲಾಗಿತ್ತು ತಾನು ಯಾರೋ ಒಬ್ಬರು ಕೊಂದು ಮೃತ ದೇಹವನ್ನು ಕೆರೆಗೆ ಎಸೆದಿರುತ್ತಾರೆ ಎಂದು ಸಂದೇಹಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 6 ಪ್ರಾ ಸಾ.4 ಶ್ರೀ ಪ್ರಕಾಶ ಇವರು ತಮ್ಮ ಸಾಕ್ಷ್ಯದಲ್ಲಿ ಒಂದು ವರ್ಷದ ಹಿಂದೆ ಸುಮಾರು ಸಂಜೆ 4 ಗಂಟೆ ಸಮಯದಲ್ಲಿ ಹೆಣ್ಣಿನ ಮೃತ ದೇಹವನ್ನು ಮತ್ತು ಲೂನಾ ಮೊಪೆಡ್ ಅನ್ನು ಕೆರೆಯಿಂದ ತೆಗೆಯುವ ಸಮಯದಲ್ಲಿ ನಿಪಿ.3 ರಂತೆ ಮಹಜರ್ ಮಾಡಿರುತ್ತಾರೆ, ಅದೇ ದಿನ ನಿಪಿ10 ರಂತೆ ಪೋಲಿಸರು ಮೃತ ದೇಹದ ಶವ ಪಂಚನಾಮೆಯನ್ನು ತಮ್ಮ ಸಮಕ್ಷಮದಲ್ಲಿ ಮಾಡಿರುತ್ತಾರೆ, ಮೃತ ದೇಹವು ಕೊಳೆತು ಹೋಗಿತ್ತು ಮತ್ತು ಅದರ ಎರಡು ಕೈಗಳನ್ನು ಪ್ಲಾಸ್ಟಿಕ್ ಹಗ್ಗದಿಂದ ಕಟ್ಟಲಾಗಿತ್ತು, ಯಾರೋ ಒಬ್ಬರು ಕೊಂದು ಮೃತಹ ದೇಹವನ್ನು ಕೆರೆಗೆ ಎಸೆದಿರುತ್ತಾರೆ ಎಂದು ಸಂದೇಹಪಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 7 ಪ್ರಾ ಸಾ.8 ಶ್ರೀಮತಿ ಸೀತಮ್ಮ, ಮಹಿಳಾ ಅರಕ್ಷಕ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 05.07.2011 ರಂದು ಅರಕ್ಷಕ ಉಪ ನಿರೀಕ್ಷಕರು, ತನ್ನನ್ನು ಶವಾಗಾರದಲ್ಲಿ ಇರುವ ಶವವನ್ನು ನೋಡಿಕೊಳ್ಳಲು ಸಾಗರದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ, ಶವ ಪರೀಕ್ಷೆಯಾದ ನಂತರ ವೈದ್ಯರು ತನಗೆ ಕಪ್ಪು ಬಣ್ಣದ ಚೂಡಿದಾರ್ ಟಾಪ್, ಕೆಂಪು ಬಣ್ಣದ ಚೂಡಿದಾರ್ ಬಾಟಮ್, ಒಳ ಉಡುಪು ಮತ್ತು ಹಳದಿ ಬಣ್ಣದ ಎರಡು ನೈಲಾನ್ ಹಗ್ಗದ ತುಂಡುಗಳನ್ನು ಸೀಲು ಮಾಡಿ ಕೊಟ್ಟಿರುತ್ತಾರೆ, ಅವುಗಳನ್ನು ತಾನು ಪೋಲಿಸ್ ಠಾಣೆಗೆ ತಂದು ತನಿಖಾಧಿಕಾರಿಗಳ ಮುಂದೆ ನಿಪಿ.4 ರ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ ಮತ್ತು ನ್ಯಾಯಾಲಯದಲ್ಲಿ ಸದರಿ ವಸ್ತುಗಳನ್ನು ತಾನು ಮು.ಮಾ 1 ರಿಂದ 14 ರವರೆಗೆ ಗುರುತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 8 ಪ್ರಾ ಸಾ.9 ಶ್ರೀ ಗೋವಿಂದ ಇವರು ತಮ್ಮ ಸಾಕ್ಷ್ಯದಲ್ಲಿ ಎರಡು ವರ್ಷಗಳ ಹಿಂದೆ ಸಂಜೆ 4 ಗಂಟೆಗೆ ತಾನು ಉಳ್ಳೂರು ಗ್ರಾಮದ ಕೆರೆಯ ಹತ್ತಿರ ಶಾಪಿಂಗ್ ಗೆ ಹೋಗುತ್ತಿರುವ ಸಮಯದಲ್ಲಿ ತನ್ನನ್ನು ಪೋಲಿಸರು ಕರೆದು ಒಂದು ಹೆಣ್ಣಿನ ಮೃತ ದೇಹವನ್ನು ತೋರಿಸಿ, ಅದನ್ನು ಕೆರೆಯಿಂದ

ತೆಗೆದಿರುವುದಾಗಿ ಹೇಳಿದರು, ಸದರಿ ಮೃತ ದೇಹವು ಸಂಪೂರ್ಣ ಕೊಳೆತು ಹೋಗಿತ್ತು ಮತ್ತು ಪೋಲಿಸರು ಅದರ ಮೇಲೆ ಮಹಜರ್ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **9** ಪ್ರಾ. ಸಾ.**10** ಶ್ರೀ ಕುಮಾರೇಗೌಡ ಯಾನೆ ಕುಮಾರಸ್ವಾಮಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **06.07.2011** ರಂದು ತನ್ನನ್ನು ಸಾಗರ ಗ್ರಾಮಾಂತರ ಪೋಲಿಸ್ ಠಾಣೆಗೆ ಕರೆದಿದ್ದು, ಅಲ್ಲಿಂದ ತನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿ ಶವಾಗಾರದಲ್ಲಿ ಒಂದು ಹೆಣ್ಣಿನ ಮೃತ ದೇಹವನ್ನು ತೋರಿಸಿ, ಮೃತದೇಹವನ್ನು ಮಣ್ಣು ಮಾಡಲು ಪಂಚರನ್ನಾಗಿ ಇರಲು ಕೇಳಿಕೊಂಡಿದ್ದು, ಅದರಂತೆ ಶವವನ್ನು ಸಾಗರ-ಸೊರಬ ರಸ್ತೆಯಲ್ಲಿ ಇರುವ ಸ್ಮಶಾನದಲ್ಲಿ ಮಣ್ಣು ಮಾಡಲು ತಾನು ಶವ ಮತ್ತು ಪೋಲಿಸರೊಂದಿಗೆ ಸ್ಮಶಾನಕ್ಕೆ ಹೋಗಿದ್ದು, ಅಲ್ಲಿ ಪೋಲಿಸರು ಮೃತ ದೇಹನ್ನು ಮಣ್ಣು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **10** ಪ್ರಾ ಸಾ.**10** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ **20.08.2011** ರಂದು ಸುಮಾರು ಬೆಳಿಗ್ಗೆ **10.30** ರಿಂದ **11** ಗಂಟೆಗೆ ಪೋಲಿಸರು ಠಾಣೆಗೆ ಕರೆದಿದ್ದು, ಅದರಂತೆ ತಾನು ಠಾಣೆಗೆ ಹೋಗಿದ್ದು, ಠಾಣೆಯಲ್ಲಿ ಸಂದೇಶ ಎಂಬುವವರು ಸಹ ಇದ್ದು, ಅಲ್ಲಿ ಅರಕ್ಷಕ ವೃತ್ತ ನಿರೀಕ್ಷಕರು **1** ನೇ ಆರೋಪಿಯನ್ನು ತೋರಿಸಿ, ಆತನ ವಿಚಾರಣೆಯ ಕಾಲಕ್ಕೆ ಪಂಚರಾಗಿ ಇರಲು ಹೇಳಿದ್ದು , ಅದರಂತೆ **1** ನೇ ಆರೋಪಿಯನ್ನು ಅರಕ್ಷಕ ವೃತ್ತ ನಿರೀಕ್ಷಕರು ತಮ್ಮ ಸಮಕ್ಷಮ ಆತನನ್ನು ವಿಚಾರಣೆ ಮಾಡಿದ್ದು, ಆತನು ತಾನು ಬಳೆಸರ ಗ್ರಾಮದ ಮಹಾಲಕ್ಷ್ಮಿ ಎಂಬುವವರನ್ನು ಮದುವೆಯಾಗಿದ್ದು, ಎಂ.ಸಿ ಹಳ್ಳಿಯಲ್ಲಿ ವಾಸವಿದ್ದು **4-5** ತಿಂಗಳ ಮಗುವನ್ನು ಮಹಾಲಕ್ಷ್ಮಿಯಿಂದ ಪಡೆದಿದ್ದು, ಸದರಿ ಮಹಾಲಕ್ಷ್ಮಿಯನ್ನು ತಾನು ಎರಡನೇ ಮದುವೆಯಾಗಿರುತ್ತೇನೆ ಎಂದು ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 11 ಪ್ರಾ ಸಾ.10 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಹಾಲಕ್ಷ್ಮಿಯು ಅವಳನ್ನು ನೀನು ಮೋಸ ಮಾಡಿ ಮದುವೆಯಾಗಿದ್ದು, ಆಸ್ತಿಯಲ್ಲಿ ಪಾಲು ಅಥವಾ ರೂ.4 ಲಕ್ಷ ಹಣವನ್ನು ಕೊಡು ಎಂದು ಕೇಳಿದಾಗ ನಿನಗೆ ಜೈಲಿನಲ್ಲಿ ಇದ್ದಾಗ ಶಿವು ಎಂಬಾತ ಪರಿಚಯವಾಗಿದ್ದು, ಆತನ ಮುಂದೆ ನಿನ್ನ ಹೆಂಡತಿ ನಿನಗೆ ತೊಂದರೆ ಕೊಡುತ್ತಿದ್ದ ಬಗ್ಗೆ ಹೇಳಿ ಅವಳನ್ನು ಹೇಗಾದರೂ ಮಾಡಿ ಮುಗಿಸಬೇಕೆಂದು ಹೇಳಿರುತ್ತೀ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 12 ಪ್ರಾ ಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಿನಗೆ ಸದರಿ ಶಿವು ತಾನು ತೊಂದರೆಯಲ್ಲಿ ಇರುವುದಾಗಿ ಮತ್ತು ಅವಳನ್ನು ಮುಗಿಸಿದರೆ ಎಷ್ಟು ಹಣ ಕೊಡುತ್ತಿ ಎಂದು ಕೇಳಿದ್ದು, ಅದಕ್ಕೆ ನೀನು ರೂ.20,000-00 ಗಳನ್ನು ಕೊಡುವುದಾಗಿ ಒಪ್ಪಿಕೊಂಡು, ನೀನು ಆತನಿಗೆ ನೂರು ರೂಪಾಯಿ ಕೊಟ್ಟಿರುತ್ತೀ ಎಂದು ಮತ್ತು ದಿನಾಂಕ 20.06.2011 ರಂದು ಸುಮಾರು 10.30 ರಿಂದ 11 ಗಂಟೆಗೆ ಸದರಿ ಶಿವು ನಿಮ್ಮ ಮನೆಗೆ ಬಂದು, ಅವಳನ್ನು ಇಂದು ಮುಗಿಸುತ್ತೇನೆ ಎಂದು ಹೇಳಿರುತ್ತಾನೆಂದು ನೀನು ಹೇಳಿರುತ್ತಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 13 ಪ್ರಾ ಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಯಾದ ನೀನು, ಸದರಿ ಶಿವುಗೆ ಸ್ವಲ್ಪ ಹೊತ್ತು ಕಾಯಿ ಎಂದು ಹೇಳಿ ಅರ್ಧ ತಾಸು ಬಿಟ್ಟು ಬಾ ಎಂದು ಹೇಳಿದ್ದು, ಅದರಂತೆ ಸದರಿ ಶಿವು ಅರ್ಧ ಗಂಟೆಯ ನಂತರ ನಿಮ್ಮ ಮನೆಗೆ ಬಂದಿದ್ದು, ಆಗ ನೀನು ಮೃತಳನ್ನು ಮನೆಯಲ್ಲಿಯೇ ಬಿಟ್ಟು ಮಗುವನ್ನು ಹೊರಗಡೆ ತೆಗೆದುಕೊಂಡು ಬಂದಿದ್ದು, ಆ ಸಮಯದಲ್ಲಿ ಶಿವು ಮೃತಳ ಮೇಲೆ ಕೈಗಳಿಂದ ಹಲ್ಲೆ ಮಾಡಿದ್ದು, ಅವಳು 'ಅಮ್ಮಾ' ಎಂದು ಚೀರಿಕೊಂಡಾಗ ನೀನು ಒಳಗೆ ಹೋಗಿ ಅವಳ ಬಾಯಿ ಮತ್ತು ಮೂಗನ್ನು ನಿನ್ನ ಕೈಗಳಿಂದ ಮುಚ್ಚಿದ್ದು, ಆಗ ಶಿವು ಅವಳ

ಕುತ್ತಿಗೆಯನ್ನು 5 ರಿಂದ 10 ನಿಮಿಷ ಹಿಸುಕಿದ್ದು, ನಂತರ ನೀನು ಮತ್ತು ಶಿವು ಮೃತಳು ಸತ್ತಿರುವುದನ್ನು ದೃಢಪಡಿಸಿಕೊಂಡಿರಿ ಎಂದು ಹೇಳಿರುತ್ತಾನೆಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 14 ಪ್ರಾ ಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನೀನು ಹೊರಗೆ ಹೋಗಿ ಒಬ್ಬ ವ್ಯಕ್ತಿಗೆ ಫೋನ್ ಮಾಡಿ ಮಗುವನ್ನು ತೆಗೆದುಕೊಂಡು ಹೋಗಲು ಕೇಳಿದ್ದು, ಅದರಂತೆ ಮಗುವನ್ನು ನೀನು ಹೊರಗೆ ಹೋಗಲು ಕೇಳಿದ್ದು, ಅದರಂತೆ ಮಗುವನ್ನು ನೀನು ಹೊರಗೆ ಹೋಗಿ ಬೈಕಿನಲ್ಲಿ ಬಂದಿದ್ದ ಆ ವ್ಯಕ್ತಿಗೆ ಕೊಟ್ಟಿದ್ದು, ನಂತರ ನೀನು ಮತ್ತು ಸದರಿ ಶಿವು, ಮೃತದೇವನ್ನು ಮತ್ತು ನೈಲಾನ್ ಹಗ್ಗವನ್ನು ಮೋಟಾರ್ ಬೈಕ್ ಕಎ 14ಃಯು 5313 ರಲ್ಲಿ ತೆಗೆದುಕೊಂಡು ಹೋಗಿದ್ದು, ಮೃತಳ ಮೈಮೇಲೆ ಇದ್ದ ಬಂಗಾರದ ತಾಳಿ ಮತ್ತು ಚೈನ್ ಕಾಲುಂಗುರ ಬೆಳ್ಳಿಯ ಕಾಲ್ಚೈನು ಒಂದು ಜೊತೆ ಕಿವಿ ಓಲೆ ಮತ್ತು ಒಂದು ಉಂಗುರವನ್ನು ತೆಗೆದುಕೊಂಡಿರುತ್ತೀರಿ ಎಂದು ಹೇಳಿರುತ್ತೀ, ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 15 ಪ್ರಾ ಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನೀನು ಮತ್ತು ಸದರಿ ಶಿವು ಉಳ್ಳೂರು ಗ್ರಾಮಕ್ಕೆ ಮೃತ ದೇಹದೊಂದಿಗೆ ತಲುಪಿದ್ದು, ಕೆರೆಯ ದಡದಲ್ಲಿ ಮೃತ ದೇಹದೊಂದಿಗೆ ತಲುಪಿದ್ದು, ಕೆರೆಯ ದಡದಲ್ಲಿ ಮೃತ ದೇವನ್ನು ಇಟ್ಟು, ಶಿವು ಪಕ್ಕದಲ್ಲಿದ್ದ ಮನೆಯ ಹತ್ತಿರ ಹೋಗಿ ಒಂದು ದೊಡ್ಡ ಕಲ್ಲನ್ನು ತಂದು ಮೃತಳ ಮುಖವನ್ನು ಅದರಿಂದ ಜಜ್ಜಿದ್ದು, ನಂತರ ಶಿವು ಮೃತಳ ಎರಡು ಕೈಗಳನ್ನು ನೈಲಾನ್ ಹಗ್ಗದಿಂದ ಕಟ್ಟಿ ಮತ್ತು ಅದಕ್ಕೆ ಕಲ್ಲನ್ನು ಕಟ್ಟಿ ಶಿವು ಕೆರೆಯಲ್ಲಿ ಇಳಿದಾಗ ನೀನು ಮೃತ ದೇಹವನ್ನು ಎತ್ತಿ ಶಿವುನ ಕೈಗೆ ಕೊಟ್ಟಿರುತ್ತಿ ಎಂದು ನೀನು ಹೇಳಿರುತ್ತೀ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 16 ಪ್ರಾ ಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಶಿವು ಮೃತದೇಹವನ್ನು ಕೆರೆಯಲ್ಲಿ 25 ಅಡಿ ದೂರ ಎಳೆದುಕೊಂಡು ಹೋಗಿ, ನೀರಿನಲ್ಲಿ ಮೃತದೇವನ್ನು ಬಿಟ್ಟಿರುತ್ತಾನೆಂದು, ನಂತರ ನೀವಿಬ್ಬರು ಕೈಕಾಲು ಮುಖ ತೊಳೆದುಕೊಂಡು ಸಾಗರಕ್ಕೆ ಹೋಗಿದ್ದು, ಬಸ್ ನಿಲ್ದಾಣದ ಹತ್ತಿರದ ಕ್ಯಾಂಟಿನನಲ್ಲಿ ಟೀ ಕುಡಿದು ಅಲ್ಲಿಂದ ಶಿವಮೊಗ್ಗಕ್ಕೆ ಬಂದು 3-4 ದಿನಗಳ ನಂತರ ಮೃತಳ ತಾಯಿ ಮನಗೆ ನೀನು ಹೋಗಿ ಮೃತಳು ಮಗುವಿನೊಂದಿಗೆ ಕಾಣೆಯಾಗಿರುವ ವಿಷಯ ತಿಳಿಸಿದೆ ಎಂದು ಹೇಳಿರುತ್ತೀ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 17 ಪ್ರಾ ಸಾ.10 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನೀನು ಮತ್ತು ಮೃತಳ ತಾಯಿ ತರೀಕೆರೆ ಪೋಲಿಸ್ ಠಾಣೆಗೆ ಹೋಗಿ ಮಿಸ್ಸಿಂಗ್ ಕಂಪ್ಲೆಂಟ್ ಕೊಟ್ಟಿರುತ್ತೀರಿ ಎಂದು, ನೀನು ಮಗುವಿಗೆ ಚಿಕಿತ್ಸೆ ಕೊಡಿಸಲು ಕಿವಿ ನತ್ತುಗಳನ್ನು ಸಾವಿರ ರೂಪಾಯಿಗೆ ಅಡ ಇಟ್ಟು, ಮಗುವನ್ನು ಬಳೆಗಾರ ಗ್ರಾಮಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಮಹಾದೇಶ ಎಂಬುವರಲ್ಲಿ ಮಗುವನ್ನು ಬಿಟ್ಟು ವಾಪಾಸ್ಸು ಬರುವಾಗ ನೀನು ಉಳ್ಳೂರ ಕೆರೆಯಲ್ಲಿ ಶವವು ತೇಲುತ್ತಿರುವುದನ್ನು ನೋಡಿ, ಶಿವುಗೆ ಪೋನು ಮಾಡಿದ್ದು, ಅದನ್ನು ಆತನು ನೋಡಿಕೊಳ್ಳುವುದಾಗಿ ಹೇಳಿದ್ದು, ನಿನ್ನನ್ನು ಕರೆದುಕೊಂಡು ಹೋದರೆ ಸ್ಥಳಗಳನ್ನು ತೋರಿಸುವುದಾಗಿ ಅರಕ್ಷಕ ವೃತ್ತ ನಿರಿಕ್ಷಕರವರ ಮುಂದೆ ಲಿಖಿತ ಹೇಳಿಕೆ ಕೊಟ್ಟಿರುತ್ತೀರಿ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 18ಃ ಪ್ರಾ. ಸಾ. 10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ20.8.2011 **ರಂದು ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯವರು ತನ್ನನ್ನು ಮತ್ತು ಸಂದೇಶ್ ಎಂಬುವವರನ್ನು ಸುಮಾರು ಬೆಳಗ್ಗೆ 10ಃ30 – 11ಃ00 ಗಂಟೆಗೆ ಠಾಣೆಗೆ ಕರೆಸಿದ್ದರು, ಪೊಲೀಸ್ ಠಾಣೆಯಲ್ಲಿ 1ನೇ ಆರೋಪಿಯಾದ** ನೀನು ಇದ್ದೆ, **ಪೊಲೀಸರು ತನ್ನನ್ನು ಮತ್ತು ಸಂದೇಶ್‌ರವರನ್ನು ಪಂಚರಾಗಿ ಇರಬೇಕೆಂದು ಕೋರಿದರು, 1ನೇ ಆರೋಪಿಯಾದ** ನೀನು ತಮ್ಮ **ಮುಂದೆ ಎಂ.ಸಿ.ಹಳ್ಳಿ, ತರೀಕೆರೆ ತಾಲ್ಲೂಕು ರಾಮೇಗೌಡರ ಮನೆಯಲ್ಲಿ** ನಿನ್ನ **ಹೆಂಡತಿಯ ಕೊಲೆ**

**ಮೂಡಿದ ಜಾಗವನ್ನು ತೋರಿಸುತ್ತೆನೆಂದು ಹೇಳಿದೆ, ಪೊಲೀಸ್ ಜೀಪಿನಲ್ಲಿ ವೃತ್ತನಿರೀಕ್ಷಕರು, ತಾನು, ಸಂದೇಶ್ ಮತ್ತು ಆರೋಪಿತರು ಎಂ.ಸಿ.ಹಳ್ಳಿಗೆ ಬಂದೆವು, 1ನೇ ಆರೋಪಿಯಾದ** ನೀನು **ಮನೆಯನ್ನು ತೋರಿಸಿದೆ, ರಾಮೇಗೌಡರ ಮನೆಯಲ್ಲಿ ನರೇಂದ್ರ ಎಂಬುವವರು ಬಾಡಿಗೆಗೆ ಇರುವುದಾಗಿ ಹೇಳಿದರು** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 19 ಪ್ರಾ.ಸಾ. 10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಯಾದ ನೀನು **ರಾಮೇಗೌಡರ ಮನೆಯ ಒಳಗಡೆ ಕರೆದುಕೊಂಡು ಹೋಗಿ ತನ್ನ ಹೆಂಡತಿಯನ್ನು ಕೊಲೆ ಮಾಡಿದ ಜಾಗ ಇದೇ ಎಂದು ಬೆಡ್‌ರೂಮ್‌ನ್ನು ತೋರಿಸಿದೆ, ಆ ರೂಮು ಒಂಭತ್ತೂವರೆ ಅಡಿ ಉದ್ದ, ಆರುವರೆ ಅಡಿ ಅಗಲ ಇತ್ತು, ಪೊಲೀಸರು ಸ್ಥಳವನ್ನು ಪರಿಶೀಲಿಸಿ ಪಂಚನಾಮೆ ಬರೆದರು, ಪಂಚನಾಮೆ ಕಾಲದಲ್ಲಿ ಪೊಲೀಸರು ವೀಡಿಯೋ ಚಿತ್ರೀಕರಣ ಮಾಡಿದರು ಮತ್ತು ಫೋಟೋವನ್ನು ತೆಗೆದರು, ಪೊಲೀಸರು ಪಂಚನಾಮೆಯನ್ನು ಸುಮಾರು 6ಃ30 ಗಂಟೆಯಿಂದ 7ಃ30 – 8ಃ00 ಗಂಟೆಯವರೆಗೂ ಮಾಡಿರುತ್ತಾರೆ, ಪೊಲೀಸರು ಮಾಡಿದ** ನಿಪಿ-16 **ಪಂಚನಾಮೆಗೆ** ತಾನು, **ಸಂದೇಶ್ ಹಾಗೂ ರಾಮೇಗೌಡರ ಮನೆಯ ಪಕ್ಕದ ಮನೆಯವರು ರುಜು ಮಾಡಿದರು, ಮಹಜರ್ ಸಮಯದಲ್ಲಿ ಪೊಲೀಸರು ತೆಗೆದ ಭಾವಚಿತ್ರಗಳನ್ನು** ನಿಪಿ-17 **ರಿಂದ 19** ರಂತೆ **ನೋಡಿದೆ** ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 20ಃ ಪ್ರಾ.ಸಾ.10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ***ಅದೇ ದಿನ ದಿಃ20.08.2011 ರಂದು ಬಳೇಗಾರ್ ಲೋಕೇಶಪ್ಪಗೌಡ ರವರ ಮನೆಗೆ 1ನೇ ಆರೋಪಿಯಾದ*** ನಿನ್ನ ***ಮನೆಗೆ ಕರೆದುಕೊಂಡು ಹೋದರು,*** ತಾನು, ***ಸಂದೇಶ, ಆರಕ್ಷಕ ಉಪನಿರೀಕ್ಷಕರು*** ನಿನ್ನ ***ಜೊತೆ ಹೋಗಿದ್ದೆವು, ಮನೆಯಲ್ಲಿ ಲೋಕೇಶಪ್ಪಗೌಡ ಇದ್ದರು, ಆ ಮನೆ ಅವರಿಗೆ ಸೇರಿದೆ,*** ನೀನುಃ***1ನೇ ಆರೋಪಿ ಮಗುವನ್ನು ಸಾಕಲು ಲೋಕೇಶಪ್ಪಗೌಡರಿಗೆ ಕೊಟ್ಟಿದ್ದೇವೆ ಎಂದು ಹೇಳಿದೆ,*** ನೀನು ***ಕೊಟ್ಟ ಕಾಲುಂಗುರ ಮತ್ತು ಕರಿಮಣಿಸರವನ್ನು ಕೊಡಿ ಎಂದು ಕೇಳಿದೆ, ಅದು ಮಹಾಲಕ್ಷ್ಮಿಯವರ ಮೈಮೇಲಿದ್ದ ಕರಿಮಣಿಸರವಾಗಿತ್ತು, ಆಕೆಯನ್ನು ಸಾಯಿಸಿದ ನಂತರ ಆ ಸರವನ್ನು ಮತ್ತು ಕಾಲುಂಗುರವನ್ನು ಲೋಕೇಶಪ್ಪಗೌಡರಿಗೆ***

*ಕೊಟ್ಟಿದ್ದೆ ಅಂತ ಹೇಳಿದೆ, ಲೋಕೇಶಪ್ಪಗೌಡ ಅದನ್ನು* ಹಾಜರುಪಡಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 21ಃ ಪ್ರಾ.ಸಾ. 10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ *ಸ್ಥಳದಲ್ಲಿ ಮಾದೇಶ ಎಂಬುವವರು ಇದ್ದು, ಅವರಿಗೆ ತಾನು ಕೊಟ್ಟ ಬೈಕ್‌ನ್ನು ಕೊಡಬೇಕೆಂದು ಕೇಳಿದರು, ಅದರ ಬೈಕ್ ನಂಬರ್ ಕೆಎ-14/ಯು-5313 ಆಗಿರುತ್ತದೆ, ಅದು ಹೀರೋ ಸ್ಪ್ಲೆಂಡರ್ ಕಂಪನಿಯದ್ದಾಗಿರುತ್ತದೆ, ಮಾದೇಶ್‌ರವರು ತಾನು ಪಡೆದಿದ್ದ ಮೋಟಾರ್‌ಬೈಕ್‌ನ್ನು ಹಾಜರುಪಡಿಸಿದರು, ಪೊಲೀಸರು ಲೋಕೇಶಪ್ಪಗೌಡ ಹಾಜರುಪಡಿಸಿದ ಕರಿಮಣಿ ಸರ, ಕಾಲುಂಗುರ ಮತ್ತು ಮಾದೇಶರವರು ಹಾಜರುಪಡಿಸಿದ ಮೋಟಾರ್ ಬೈಕ್‌ನ್ನು ನಿಪಿ-22* ರಂತೆ *ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡರು, ಮಹಜರ್ ಆದ ಮೇಲೆ ಕತ್ತಲಾದ್ದರಿಂದ ವಾಪಸ್ಸು ಸಾಗರಕ್ಕೆ ಬಂದೆವು, ಮರುದಿನ ಪೊಲೀಸರು ತನ್ನನ್ನು ಮತ್ತು ಸಂದೇಶ್‌ರವರನ್ನು ಠಾಣೆಗೆ ಬರಲಿಕ್ಕೆ ಹೇಳಿದ್ದರು, 2ನೇ ಆರೋಪಿ ಠಾಣೆಯಲ್ಲಿದ್ದು, ಆತನೊಂದಿಗೆ* ತಾನು *ಪೊಲೀಸ್ ಇನ್ಸ್‌ಪೆಕ್ಟರ್, ಸಂದೇಶ, ಪೊಲೀಸ್ ಸಿಬ್ಬಂದಿಯೊಂದಿಗೆ ಆತನ ಮನೆಗೆ ಹೋದೆವು* ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 22ಃ ಪ್ರಾ.ಸಾ. 10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ *ಆತನ ಮನೆಯಲ್ಲಿ ಒಂದು ಕಪ್ಪು ಬ್ಯಾಗ್ ಇತ್ತು, ಅದರಲ್ಲಿ ಒಂದು ಪ್ಯಾಂಟ್ ಇತ್ತು, ಪ್ಯಾಂಟ್‌ನ ಜೇಬಿನಲ್ಲಿ ಒಂದು ಉಂಗುರ ಇತ್ತು, ಅದು ರೋಲ್ಡ್ ಗೋಲ್ಡ್ ತರದ್ದಾಗಿತ್ತು, ಅದನ್ನು 2ನೇ ಆರೋಪಿ ಮಹಾಲಕ್ಷ್ಮಿಯನ್ನು ಕೊಲೆ ಮಾಡಿದ ನಂತರ ಆಕೆಯ ಬೆರಳಿನಲ್ಲಿದ್ದದನ್ನು ತೆಗೆದುಕೊಂಡಿದ್ದಾಗಿ* ಹಾಜರುಪಡಿಸಿದರು, *ಅದನ್ನು ಪೊಲೀಸರು ನಿಪಿ-23 ರ ಮಹಜರ್‌ನಡಿ ಅಮಾನತ್ತುಪಡಿಸಿಕೊಂಡರು, ಪೊಲೀಸರು ವಶಪಡಿಸಿಕೊಂಡ ಕಾಲುಂಗುರ, ಕರಿಮಣಿಸರ, ಉಂಗುರ ಹಾಗೂ ಬೈಕ್‌ನ್ನು ನೋಡಿದರೆ ಗುರುತಿಸುತ್ತೇನೆ, ತನಿಖಾ ಕಾಲದಲ್ಲಿ ಮಾಡಿ ಡಿವಿಡಿ ಯನ್ನು ತೆರೆದ ನ್ಯಾಯಾಲಯದಲ್ಲಿ ಲ್ಯಾಪ್‌ಟಾಪ್ ಮೂಲಕ ವೀಕ್ಷಿಸಲಾಯಿತು* ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 23ಃ ಪ್ರಾ.ಸಾ. 10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ *ಅದರಲ್ಲಿ ನಾಲ್ಕು*

*ವೀಡಿಯೋಗಳಿದ್ದು, ಅದರ ಪೈಕಿ ಮೂರು ವೀಡಿಯೋಗಳು ಮೃತ ಮಹಾಲಕ್ಷ್ಮಿಯವರ ಶವವನ್ನು ಕೆರೆಯಿಂದ ತೆಗೆದ ಬಗ್ಗೆ ಸಂಬಂಧಪಟ್ಟಿರುತ್ತದೆ, ಒಂದು ವೀಡಿಯೋದಲ್ಲಿ ಲೂನಾ ನಂ.ಕೆಎ-14/447 ಕ್ಕೆ ಸಂಬಂಧಪಟ್ಟಿರುತ್ತದೆ, ಚಿನ್ನದಂತಿರುವ ಮಾಂಗಲ್ಯ ಸರವನ್ನು ಮು,ಮಾ.7 ಎರಡು ಬೆಳ್ಳಿಯ ಕಾಲುಂಗುರಗಳನ್ನು ಮು,ಮಾ.8 ಎಂದೂ, ಚಿನ್ನದಂತಿರುವ ಉಂಗುರವನ್ನು ಮು.ಮಾ.9 ಎಂದು ಗುರುತಿಸಲಾಯಿತು* ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **24** ಪ್ರಾ ಸಾ.**12** ಶ್ರೀ ರಾಘವೇಂದ್ರ, ಅರಕ್ಷಕ ಪೇದೆ ನಂ.**1561** ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **29.07.2011** ರಂದು ಮೊಕದ್ದಮೆ ನಂ **210ಃ2011** ಕ್ಕೆ ಸಂಬಂಧಿಸಿದಂತೆ ಸೀಲಾದ ವಸ್ತುಗಳನ್ನು ಅರಕ್ಷಕ ವೃತ ನೀರಿಕ್ಷಕರವರ ಆದೇಶದ ಮೇರೆಗೆ ತೆಗೆದುಕೊಂಡು ದಿನಾಂಕ **30.07.2011** ರಂದು ಆರ್.ಎಫ್. ಎಸ್.ಎಲ್ ದಾವಣಗೆರೆಗೆ ತಲುಪಿಸಿರುತ್ತೇನೆ, ದಿನಾಂಕ **03.08.2011** ರಂದು ತನ್ನನ್ನು ಅರಕ್ಷಕ ವೃತ್ತ ನಿರೀಕ್ಷಕರು, ಜೆ. ಜೆ. ಮೆಡಿಕಲ್ ಕಾಲೇಜ್ ಮತ್ತು ಆರ್.ಎಫ್.ಎಸ್. ಎಲ್ ದಾವಣಗೆರೆಗೆ ಸೀಲಾದ ವಸ್ತುಗಳನ್ನು ತಲುಪಿಸಲು ನಿಯೋಜನೆ ಮಾಡಿದ್ದು, ಅವುಗಳನ್ನು ತಲುಪಿಸಿ ಅರಕ್ಷಕ ವೃತ್ತ ನಿರೀಕ್ಷಕರವರಿಗೆ ವರದಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **25** ಪ್ರಾ.ಸಾ.**12** ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ **05.08.2011** ರಂದು ಅರಕ್ಷಕ ವೃತ್ತ ನಿರೀಕ್ಷಕರವರ ಆದೇಶದ ಮೇರೆಗೆ ಜೆ.ಜೆ ಮೆಡಿಕಲ್ ಕಾಲೇಜಿಗೆ ಹೋಗಿ ಸೀಲಾದ ವಸ್ತುಗಳನ್ನು ತೆಗೆದುಕೊಂಡು ಸಿಮ್ಸ್ ಶಿವಮೊಗ್ಗಕ್ಕೆ ಅದೇ ದಿನ ಸದರಿ ವಸ್ತುಗಳನ್ನು ಪರೀಕ್ಷೆಗಾಗಿ ತಲುಪಿಸಿರುತ್ತೇನೆ, ದಿನಾಂಕ **25.08.2011** ರಂದು ಸಾಗರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಮೃತಳ ತಲೆಬುರುಡೆ ತೆಗೆದುಕೊಂಡು ಬಂದು ಅದನ್ನು ಅರಕ್ಷಕ ವೃತ್ತ ನಿರೀಕ್ಷರವರ ಮುಂದೆ ನಿಪಿ.**15** ರ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **26** ಪ್ರಾ ಸಾ.**13** ಶ್ರೀ ಕೆ.ಎಂ. ಪರಮೇಶ್ವರ ಇವರು ತಮ್ಮ ಸಾಕ್ಷ್ಯದಲ್ಲಿ **1994** ರಲ್ಲಿ ತಾನು ಲೂನಾ TFR ಅನ್ನು ರವಿ ಅಟೋಮೊಬೈಲ್ಸ ರವರಿಂದ ಖರೀದಿಸಿದ್ದು, ಅದನ್ನು ARTO ಕಛೇರಿಯಲ್ಲಿ KA-14/H-4447 ರಂತೆ ನೊಂದಾಯಿಸಿರುತ್ತೆ, ಅದನ್ನು ಚಾಸಾ 18-ಚನ್ನಪ್ಪಗೌಡರಿಗೆ ರೂ.3000-00 ಗಳಿಗೆ ಮಾರಾಟ ಮಾಡಿದ್ದು, ಫಾರಂ ನಂ.29 ಮತ್ತು 30 ಅನ್ನು ಚಾಸಾ 18 ರವರ ಹೆಸರಿಗೆ ಬರೆದಿದ್ದು, ಅವರಿಗೆ ವಾಹನವನ್ನು ಹಸ್ತಾಂತರ ಮಾಡಿರುತ್ತೇನೆ, ಚಾಸಾ 18 ರವರು RC ಅನ್ನು ತಮ್ಮ ಹೆಸರಿಗೆ ಮಾಡಿಕೊಂಡಿರಲಿಲ್ಲ ಮತ್ತು ಅದನ್ನು ಅವರು ಒಬ್ಬ ಕೇಬಲ್ ಅಪರೇಟರಿಗೆ ಮಾರಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **27**ಃ ಪ್ರಾ. ಸಾ. **14** ಶ್ರೀ ಡಿ.ಕೆ. ನರೇಂದ್ರ ಇವರು ತಮ್ಮ ಸಾಕ್ಷ್ಯದಲ್ಲಿ ***ಆರೋಪಿಯಾ***ದ ನಿನ್ನನ್ನು ***ಪೊಲೀಸರು*** ತಾನು ***ಎಂ.ಸಿ.ಹಳ್ಳಿಯಲ್ಲಿರುವ ಚಾಸಾ.53 ರವರ ಬಾಡಿಗೆ ಮನೆಯಲ್ಲಿದ್ದಾಗ ಅಲ್ಲಿಗೆ ಕರೆದುಕೊಂಡು ಬಂದಿದ್ದರು, ಆರೋಪಿಯಾ***ದ ನಿನ್ನನ್ನು ***ಸದರಿ ಮನೆಯ ಹತ್ತಿರ ಕರೆದುಕೊಂಡು ಬರುವ ಒಂದು ತಿಂಗಳ ಹಿಂದಿನಿಂದ*** ತಾನು ***ಸದರಿ ಮನೆಯಲ್ಲಿ ಬಾಡಿಗೆಗೆ ವಾಸವಿದ್ದೆ,*** ತಾನಿದ್ದ ***ಸದರಿ ಬಾಡಿಗೆ ಮನೆಯಲ್ಲಿಯೇ ಆರೋಪಿ*** ನೀನು ತನಗಿಂತ ***ಮುಂಚಿತವಾಗಿ ಬಾಡಿಗೆಗೆ ಇದ್ದು, ವಾಸವಾಗಿದ್ದರು, ಸದರಿ ಮನೆಯಲ್ಲೇ 1ನೇ ಆರೋಪಿಯಾದ*** ನಿನ್ನ ***ಹೆಂಡತಿಯ ಕೊಲೆಯಾದ ವಿಚಾರದಲ್ಲಿ ಪೊಲೀಸರು ಮಹಜರ್‌ಗಾಗಿ ಅವಕಾಶ ಮಾಡಿಕೊಡಲು ತನ್ನನ್ನು ಕೇಳಿದರು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **28**ಃ ಪ್ರಾ.ಸಾ.**14** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ***ಅದರಂತೆ ಪೊಲೀಸರು ಸದರಿ ಮನೆಯಲ್ಲಿ ಮಹಜರ್‌ನ್ನು*** ಮಾಡಿದರು, ***ಆ ಸಮಯದಲ್ಲಿ ಪಕ್ಕದ ಮನೆಯುವರಾದ ಚಾಸಾ.28:ರುದ್ರೇಶ್‌ರವರು ಇದ್ದರು, 1ನೇ ಆರೋಪಿಯಾ***ದ ನೀನು ***ಸದರಿ ಮನೆಯಲ್ಲಿ ಮಲಗುವ ರೂಮ್‌ನಲ್ಲಿ ಕೊಲೆಯಾಗಿರುವ ಬಗ್ಗೆ ಹೇಳಿ ಸ್ಥಳವನ್ನು ತೋರಿಸಿ***ದೆ, ***ಆಗ ಪೊಲೀಸರು ಮಹಜರ್‌ನ್ನು ಬರೆದು ಫೋಟೋವನ್ನು ನಿಪಿ-17 ರಿಂದ 19*** ರಂತೆ ***ತೆಗೆದರು, ಪೊಲೀಸರು ಸ್ಥಳಕ್ಕೆ ಬಂದಾಗ ಸಮಯ ಸಂಜೆ 6 ಗಂಟೆ ಆಗಿತ್ತು, ಪೊಲೀಸರು ಮಹಜರ್ ಮಾಡಿದಂತಹ ರೂಮ್*** ತಮ್ಮ ***ಮನೆಯ ಒಳಗಿರುವ ಹಾಲ್ ಆದ ನಂತರ ಮಲಗುವ ಕೋಣೆಯಾಗಿರುತ್ತದೆ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 29ಃ ಪ್ರಾ.ಸಾ. 15 ಡಾಃ ಗೀತಾ ಎನ್.ಎಸ್. ವೈದ್ಯಾಧಿಕಾರಿಗಳು ತಮ್ಮ ಸಾಕ್ಷ್ಯದಲ್ಲಿ ***ದಿಃ19.3.2011 ರಲ್ಲಿ ಒಬ್ಬ ಮಹಾಲಕ್ಷ್ಮಿ ಎಂಬುವವರು ಅವರ ಗಂಡನಾದ*** ನಿನ್ನ ***ಜೊತೆ ಹೆರಿಗೆ ನೋವಿನಿಂದ ಬಂದಿದ್ದರು, ಆಕೆಗೆ ಆ ಸಮಯದಲ್ಲಿ 9 ತಿಂಗಳು 5 ದಿನ ತುಂಬಿತ್ತು, ಸದರಿ ವ್ಯಕ್ತಿಯ ವಿವರಗಳನ್ನು ಆಕೆಯ ಗಂಡನಾದ*** ನಿನಗೆ ***ನೀಡಿದರು, ಸದರಿ ವಿವರಗಳನ್ನು*** ತಾನು ***ಕೇಸ್‌ಶೀಟ್‌ನಲ್ಲಿ ನಮೂದಿಸಿರುತ್ತೇನೆ, ಆಕೆಯನ್ನು ಪರೀಕ್ಷೆ ಮಾಡಿದಾಗ ಆಕೆಗೆ ಹೆರಿಗೆ ನೋವಿತ್ತು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 30ಃ ಪ್ರಾ. ಸಾ. 15 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ***ಆಕೆಗೆ ದಿಃ19.3.2011 ರಂದು ಬೆಳಗ್ಗೆ 8ಃ31 ನಿಮಿಷಕ್ಕೆ ಹೆರಿಗೆ ಆಗಿದ್ದು, ಹೆಣ್ಣು ಮಗು ಜನಿಸಿತು, ಸದರಿ ಮಗುವಿನ ತೂಕ 2 ಕೆ.ಜಿ. ಇತ್ತು, 48 ತಾಸುಗಳ ಕಾಲ ಆಕೆಯನ್ನು*** ತಮ್ಮ ***ಆಸ್ಪತ್ರೆಯಲ್ಲಿ ಇಟ್ಟುಕೊಂಡು, ನಂತರ ದಿಃ21.3.2011 ರಂದು ಆಕೆಯನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿದೆವು, ಸದರಿ ಮಹಾಲಕ್ಷ್ಮಿ ರವರ ಹೆರಿಗೆ ಸಂಬಂಧ ಕೇಸ್ ಶೀಟ್‌ನ ನಕಲನ್ನು ನಿಪಿ-20*** ರಂತೆ ಇರುತ್ತದೆ, ***ಸದರಿ ಮಹಾಲಕ್ಷ್ಮಿರವರು*** ತಮ್ಮ ***ಆಸ್ಪತ್ರೆಯಲ್ಲಿ ಮಗುವಿಗೆ ಜನ್ಮ ನೀಡಿದ ಬಗ್ಗೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ, ಇದಾದ 5 ತಿಂಗಳ ನಂತರ ಪೊಲೀಸರು ನ್ಯಾಯಾಲಯದ ಮುಂದಿರುವ 1ನೇ ಆರೋಪಿಯಾದ*** ನಿನ್ನ ***ಜೊತೆ*** ತಮ್ಮ ***ಆಸ್ಪತ್ರೆಗೆ ಬಂದಿದ್ದರು, ಸದರಿ ಆರೋಪಿಯನ್ನು*** ತಾನು ***ಆ ದಿನ ನೋಡಿ ಗುರುತಿಸಿರುತ್ತೇನೆ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 31ಃ ಪ್ರಾ.ಸಾ.16 ಶ್ರೀ ಫಕೀರೇಶ್ ಪಿಸಿ 1017 ತಡಸ ಪೋಲಿಸ್ ಠಾಣೆ, ಹಾವೇರಿ ಇವರು ತಮ್ಮ ಸಾಕ್ಷ್ಯದಲ್ಲಿ ***ದಿಃ20.08.2011 ರಂದು 1ನೇ ಆರೋಪಿಯಾದ*** ನಿನ್ನನ್ನು ***ಸಾಗರದ ಸಿಪಿಐ ರವರು ಬಂಧಿಸಿದ್ದರು, ಆ ಸಮಯದಲ್ಲಿ ಆರೋಪಿ*** ನಿನ್ನಿಂದ ***ಸಿಪಿಐ ರವರು ಸ್ವಇಚ್ಛಾ ಹೇಳಿಕೆಯನ್ನು ಪಡೆದಿದ್ದು, ಆ ಸ್ವಇಚ್ಛಾ ಹೇಳಿಕೆಯನ್ನು*** ತಾನೇ ತನ್ನ ***ಕೈಬರವಣಿಗೆಯಿಂದ ಮಾಡಿರುತ್ತೇನೆ, ಸದರಿ ಸ್ವಇಚ್ಛಾ ಹೇಳಿಕೆಯಲ್ಲಿ*** ನೀನು ***ಕೃತ್ಯ ನಡೆದ ಸ್ಥಳವನ್ನು ತೋರಿಸುವುದಾಗಿ ತಿಳಿಸಿ,*** ತಮ್ಮಗಳನ್ನು ***ತರೀಕೆರೆ ಎಂ.ಸಿ.ಹಳ್ಳಿಯ ಒಬ್ಬ ನರೇಂದ್ರ ಎಂಬುವವರ ವಾಸದ ಮನೆಯ ಹತ್ತಿರ ಕರೆದುಕೊಂಡು ಹೋದೆ,*** ತಮ್ಮಗಳ ***ಜೊತೆ ಇಬ್ಬರು ಪಂಚರು ಇದ್ದರು, ಆರೋಪಿಯಾದ*** ನೀನು ***ಒಬ್ಬ*** ಶಿವು ***ಎಂಬುವವನ ಜೊತೆ***

***ಸೇರಿ ಮೃತ ಮಹಾಲಕ್ಷ್ಮಿರವರನ್ನು ಸದರಿ ಮನೆಯಲ್ಲೇ ಕೃತ್ಯ ಎಸಗಿದ್ದಾಗಿ*** ಹೇಳಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **32** ಪ್ರಾ.ಸಾ. **16** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ***ದಿಃ21.08.2011 ರಂದು 2ನೇ ಆರೋಪಿ ಶಿವು ಎಂಬುವವನ್ನು ದಸ್ತಗಿರಿ ಮಾಡಿದ್ದು, ಆತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಮೃತ ಮಹಾಲಕ್ಷ್ಮಿರವರಿಗೆ ಸೇರಿದ ಎರಡು ಕೈ ಬೆರಳು ಉಂಗುರಗಳನ್ನು ತೆಗೆದುಕೊಂಡಿದ್ದು, ತನ್ನ ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ, ನಂತರ ಅದೇ ದಿನದಂದೇ ಚೂರಿಕಟ್ಟೆಯಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ, ತನ್ನ ಮನೆಯ ಒಳಗಿನಿಂದ ಎರಡು ಉಂಗುರಗಳನ್ನು ಹಾಜರುಪಡಿಸಿದ, ಆ ಸಮಯದಲ್ಲಿ ಪಂಚರ ಸಮಕ್ಷಮ ನಿಪಿ-23 ಮಹಜರ್‌ನಡಿಯಲ್ಲಿ ಸದರಿ ಉಂಗುರಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **33**ಃ ಪ್ರಾ. ಸಾ. **16** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ***ಈ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡಿರುವ ಬೈಕ್‌ನ್ನು ಅದರ ಮಾಲೀಕರಿಗೆ ಮಧ್ಯಂತರ ವಶಕ್ಕೆ ಕೊಡಲಾಗಿದ್ದು, ಅವರಿಗೆ ಸಮನ್ಸ್‌ನ್ನು ನೀಡಲಾಗಿದ್ದು, ಆತ ಕೊಟ್ಟಿರುವ ವಿಳಾಸದಲ್ಲಿ ವಾಸವಿರದೇ ಇರುವುದರಿಂದ ಆತನು ಬರೆದುಕೊಟ್ಟಿರುವ ರೂ.25,000/- ಮುಚ್ಚಳಿಕೆಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು, ಆ ಹಣದ ವಸೂಲಾತಿಗಾಗಿ ಪ್ರತ್ಯೇಕ ಪ್ರಕರಣವನ್ನು ದಾಖಲಿಸಲು ಆದೇಶಿಸಲಾಗಿದೆ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **34**ಃ ಪ್ರಾ.ಸಾ. **17** ಶ್ರೀ ರಾಮು ಇವರು ತಮ್ಮ ಸಾಕ್ಷ್ಯದಲ್ಲಿ ತಾನು ***2011 ನೇ ಸಾಲಿನಲ್ಲಿ ಚಿನ್ನ, ಬೆಳ್ಳಿ ಅಂಗಡಿಯ ಮುಂದೆ ಬಿದ್ದಿದ್ದಂತಹ ಮಣ್ಣಿನಿಂದ ಚಿನ್ನದ ಪುಡಿಯನ್ನು ತೆಗೆಯುವ ಕೆಲಸವನ್ನು ಮಾಡಿಕೊಂಡಿದ್ದೆ, ಆ ಸಮಯದಲ್ಲಿ*** ತಾನು ***ರಾಘವೇಂದ್ರ ಎಂಬುವವರಿಂದ ಹಳೆಯ ಲೂನಾವನ್ನು ಖರೀದಿ ಮಾಡಿದ್ದೆ, ಅದರ ಸಂಖ್ಯೆಃ 4447 ಆಗಿರುತ್ತದೆ, ಅವರು ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು*** ತನಗೆ ***ಕೊಟ್ಟಿಲ್ಲ,*** ತಾನು ***ದಾಖಲೆಯನ್ನು*** ತನ್ನ ***ಹೆಸರಿಗೆ ಬದಲಾಯಿಸಿಕೊಂಡಿಲ್ಲ,*** ತನ್ನ ***ತಮ್ಮನಿಗೆ ಆ ಲೂನಾವನ್ನು ಓಡಿಸಲು 15 ದಿನಗಳು ಕೊಟ್ಟಿದ್ದೆ, ಆತ***

***ಗಾಂಧಿಬಜಾರ್‌ನಲ್ಲಿ ನಿಲ್ಲಿಸಿದ್ದಾಗ ಯಾರೋ ಕದ್ದುಕೊಂಡು ಹೋಗಿದ್ದರು, ಹುಡುಕಿದೆ ಸಿಗಲಿಲ್ಲ ಎಂದು ತಿಳಿಸಿದ,*** ತನ್ನ ***ಹತ್ತಿರ ಯಾವುದೇ ದಾಖಲೆ ಇಲ್ಲದೇ ಇದ್ದಿದ್ದರಿಂದ*** ತಾನು ***ಆ ಬಗ್ಗೆ ದೂರನ್ನು ಕೊಡಲಿಲ್ಲ,*** ತಾನು ***ಸದರಿ ಲೂನಾವನ್ನು ಸಾಗರ ಪೊಲೀಸ್ ಠಾಣೆಯಲ್ಲಿ ನೋಡಿ ಗುರುತಿಸಿದೆ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 35ಃ ಪ್ರಾ.ಸಾ. 18 ಶ್ರೀ ಲಕ್ಷ್ಮಣ ಇವರು ತಮ್ಮ ಸಾಕ್ಷ್ಯದಲ್ಲಿ ***ಪೊಲೀಸರು 1ನೇ ಆರೋಪಿಯಾದ*** ನಿನ್ನನ್ನು ***ಎಂ.ಸಿ.ಹಳ್ಳಿಗೆ ಕರೆದುಕೊಂಡು ಬಂದಿದ್ದು, ಅದಕ್ಕೆ ಎರಡು ತಿಂಗಳ ಹಿಂದೆ*** ನೀನು, ನಿನ್ನ ***ಹೆಂಡತಿ 3-4 ತಿಂಗಳು ವಾಸವಿದ್ದರು, 1ನೇ ಆರೋಪಿಯಾದ*** ನೀನು ***ಮತ್ತು*** ನಿನ್ನ ***ಹೆಂಡತಿ ಸದರಿ ಮನೆಗೆ ವಾಸಕ್ಕೆ ಬಂದಾಗ*** ನಿನ್ನ ***ಹೆಂಡತಿ ಗರ್ಭಿಣಿಯಾಗಿದ್ದಳು, ತದನಂತರ ಆಸ್ಪತ್ರೆಯಲ್ಲಿ ಮಗು ಹುಟ್ಟಿತ್ತು, ಮನೆಗೆ ಕರೆದುಕೊಂಡು ಬಂದಿದ್ದರು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 36ಃ ಪ್ರಾ.ಸಾ. 18 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ***ಆರೋಪಿಯಾದ*** ನಿನ್ನನ್ನು ***ಮನೆಯ ಬಳಿ ಕರೆದುಕೊಂಡು ಬಂದಾಗ ಆ ಮನೆಯಲ್ಲಿ ನರೇಂದ್ರ ಎಂಬುವವರು ವಾಸವಿದ್ದರು,*** ನೀನು ***ಆ ಮನೆಯಲ್ಲಿ ವಾಸವಿದ್ದೆವು ಅಂತ ಹೇಳಿ ತೋರಿಸಿದೆ, ಆ ಸಮಯದಲ್ಲಿ ಒಂದು ಮಹಜರ್ ನಿಪಿ-16*** ರಂತೆ ***ಮಾಡಲಾಯಿತು, ತದನಂತರ 1ನೇ ಆರೋಪಿ*** ನಿನ್ನ ***ಹೆಂಡತಿ ದೀಪಾಳನ್ನು ಕೊಲೆ ಮಾಡಿದ್ದಿಯಾ ಅಂತ ಗೊತ್ತಾಯಿತು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 37ಃ ಪ್ರಾ.ಸಾ. 19 ಶ್ರೀ ಬೇಹುಲಾಲ್, ಅಭಿನಂದ್ ಜ್ಯುವಲರ್ಸ್, ಶಿವಮೊಗ್ಗ ಇವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ***ಅಂಗಡಿಯಲ್ಲಿ ಉಮೇಶ್ ಎನ್ನುವವರು ಮ್ಯಾನೇಜರ್ ಕೆಲಸ ಮಾಡುತ್ತಾರೆ, ಅಂಗಡಿಯ ವಹಿವಾಟನ್ನು ಮಾಡಿದ ನಂತರ ಸಂಜೆ ವಿವರಗಳನ್ನು ತನಗೆ ನೀಡುತ್ತಾರೆ, ದಿಃ21.06.2011 ರಂದು ಚಿನ್ನದ ಎರಡು ಬಟನ್ಸ್‌ಗಳನ್ನು ಗಿರವಿ ಇಟ್ಟು, ರೂ.1,000/- ಪಡೆದಿದ್ದರು, ಅದಕ್ಕೆ ಸಂಬಂಧಪಟ್ಟ ರಶೀತಿಯನ್ನು ನಿಪಿ-26*** ರಂತೆ ***ಕೊಟ್ಟಿರುತ್ತಾರೆ, ಒಂದು ಜೊತೆ ಬೆಳ್ಳಿ ಚೈನನ್ನು***

*ಗಿರವಿ ಇಟ್ಟು, ರೂ.800/- ಪಡೆದಿದ್ದರು, ಕಾಲು ಚೈನ್ ಕೊಟ್ಟ ಬಗ್ಗೆ ಚೀಟಿಯನ್ನು ನಿಪಿ-27 ಎಂದು* ***ಗುರುತಿಸಲಾಯಿತು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 38ಃ ಪ್ರಾ.ಸಾ. 20 ಶ್ರೀ ಜಿ.ಎಸ್. ಉಮೇಶ್ ಮ್ಯಾನೇಜರ್ ಅಭಿನಂದನ್ ಜ್ಯುವೆಲರ್ಸ್ ಇವರು ತಮ್ಮ ಸಾಕ್ಷ್ಯದಲ್ಲಿ ತಾನು *1998 ರಿಂದ ಅಭಿನಂದನ್ ಜ್ಯುವೆಲ್ಲರಿ ಅಂಗಡಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ, ಬೇಹುಲಾಲ್‌ರವರು ಅದರ ಮಾಲೀಕರಾಗಿರುತ್ತಾರೆ,* ತಮ್ಮ *ಅಂಗಡಿಯಲ್ಲಿ ಒಡವೆಗಳನ್ನು ಗಿರವಿ ಇಟ್ಟುಕೊಳ್ಳುತ್ತೇವೆ,* ತನಗೆ *1ನೇ ಆರೋಪಿ ಗೊತ್ತು, ಆತ 2-3 ಸಾರಿ ಒಡವೆಗಳನ್ನು ಗಿರವಿ ಇಟ್ಟು ಬಿಡಿಸಿಕೊಂಡಿದ್ದ, ಕೊನೆಯದಾಗಿ ದಿಃ21.06.2011 ರಲ್ಲಿ ಬಂಗಾರದ ಗುಂಡುಗಳನ್ನು ಗಿರವಿ ಇಟ್ಟಿದ್ದರು, ಅದರ ತೂಕ 940 ಮಿಲಿ ಇತ್ತು, ಅದರ ಅಂದಾಜು ಬೆಲೆ ರೂ.1000 ಇತ್ತು, ರೂ.800/-ಕ್ಕೆ ಗಿರವಿ ಇಟ್ಟಿದ್ದರು, ಆ ಬಗ್ಗೆ ನಿಪಿ-26 ರಶೀತಿಯನ್ನು ನೀಡಿರುತ್ತೇನೆ, ಅದರಲ್ಲಿ 1ನೇ ಆರೋಪಿಯಾ*ದ ನಿನ್ನ *ಸಹಿ ಇದೆ* ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 39ಃ ಪ್ರಾ. ಸಾ. 20 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ *ದಿಃ23.06.2011 ರಂದು ಒಂದು ಜೊತೆ ಬೆಳ್ಳಿ ಚೈನನ್ನು ಗಿರವಿ ಇಟ್ಟಿದ್ದರು, ಅದಕ್ಕೆ ಚೀಟಿಯನ್ನು ನಿಪಿ-27* ರಂತೆ *ಕೊಟ್ಟಿರುತ್ತೇನೆ, ಪ್ರತಿದಿನದ ವ್ಯವಹಾರವನ್ನು ಮಾಲೀಕರಿಗೆ ತಿಳಿಸುತ್ತೇನೆ, ಅದೇ ರೀತಿ ನಿಪಿ-26 ಮತ್ತು 27 ರ ದಾಖಲೆ ಬಗ್ಗೆ ಕೂಡ ತಿಳಿಸಿದ್ದೇನೆ, ಪೊಲೀಸರು ಎರಡು ತಿಂಗಳ ನಂತರ* ನಿನ್ನನ್ನು *ಕರೆದುಕೊಂಡು ಅಂಗಡಿಯ ಹತ್ತಿರ ಬಂದಿದ್ದರು, ಗಿರವಿ ಇಟ್ಟ ವಸ್ತುಗಳನ್ನು ಪೊಲೀಸರಿಗೆ ತೋರಿಸಿರುತ್ತೇನೆ, ಗಿರವಿ ಇಟ್ಟ ವಸ್ತುಗಳನ್ನು ವಾಪಸ್ಸು ಪಡೆಯಲು ಕೊಟ್ಟ ಚೀಟಿ, ಅಸಲು ಮತ್ತು ಬಡ್ಡಿಯನ್ನು ಕೊಡಬೇಕು, ಆ ಒಡವೆಗಳು ತನ್ನ ಹೆಂಡತಿಯ ಒಡವೆಗಳು ಅಂತ 1ನೇ ಆರೋಪಿಯಾ*ದ ನೀನು ಹೇಳಿದೆ, *ಆಸ್ಪತ್ರೆಗೆ ಹಣ ಕಟ್ಟಬೇಕು ಅಂತ ಹೇಳಿದರು, ಆದ್ದರಿಂದ ಒಡವೆಯನ್ನು ಗಿರವಿ ಇಟ್ಟುಕೊಂಡಿರುತ್ತೇವೆ* ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 40ಃ ಪ್ರಾ.ಸಾ. 27 ಶ್ರೀಮತಿ ಲೋಲಾಕ್ಷಿ ಇವರು ತಮ್ಮ ಸಾಕ್ಷ್ಯದಲ್ಲಿ ***ಚಾಸಾ.41 ರವರು*** ತನ್ನ ***ಗಂಡ, ತನಗೆ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು, ಆಕೆ ಮಹಾಲಕ್ಷ್ಮಿ, ಆರೋಪಿಯಾದ*** ನೀನು ತನ್ನ ***ಮಗಳ ಗಂಡ, ಸುಮಾರು ಆರು ವರ್ಷಗಳ ಹಿಂದೆ*** ತನ್ನ ***ಮಗಳು ಸಿಗಂಧೂರಿಗೆ ಹೋಗಬೇಕಾದರೆ ಆತನ ಪರಿಚಯವಾಗಿತ್ತು,*** ನೀನು ತನ್ನ ***ಮಗಳ ಜೊತೆ ಮನೆಗೆ ಬಂದಿದ್ದೆ,*** ನೀನು ತನ್ನ ***ಮಗಳನ್ನು ಮದುವೆ ಮಾಡಿಕೊಡಿ ಅಂತ ಕೇಳಿದೆ,*** ತಮ್ಮ ***ಮನೆಯು ನೆಲ ಮಣ್ಣಿನ ನೆಲವಾಗಿದ್ದು,*** ನೀನು ***ತುದಿಗಾಲಿನಲ್ಲಿ*** ತಮ್ಮ ***ಮನೆ ಒಳಗೆ ನಡೆದೆ,*** ತಾವು ***ಬಡವರಾಗಿದ್ದರಿಂದ*** ನಿನಗೆ ***ಹೆಣ್ಣು ಕೊಡಲು ಇಷ್ಟ ಇರಲಿಲ್ಲ,*** ಏಕೆಂದರೆ ನೀನು ***ಶ್ರೀಮಂತ ಅಂತ ಹೇಳಿಕೊಂಡೆ,*** ನಿನಗೆ ***ಆರು ಎಕರೆ ಜಮೀನು, 10 ಲಕ್ಷದ ಬಿಲ್ಡಿಂಗ್ ಇದೆ ಅಂತ ಹೇಳಿದರು,*** ನಿನಗೆ ***ವಯಸ್ಸು ಜಾಸ್ತಿಯಾಗಿತ್ತು*** ತನ್ನ ***ಮಗಳು*** ನಿನಗಿಂತ ***ಬಹಳ ಚಿಕ್ಕವಳಾಗಿದ್ದಳು, ಆದ್ದರಿಂದ*** ತಾವು ***ಕೊಡಲು ಒಪ್ಪಿರಲಿಲ್ಲ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 41ಃ ಪ್ರಾ.ಸಾ.27 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನ್ನ ***ಮಗಳು ಮದುವೆ ಬೇಡ ಅಂತ ಹೇಳಿದೆವು,*** ಅದಕ್ಕೆ ***ಮೊದಲು*** ತನ್ನ ***ಮಗಳು ಒಪ್ಪಿಕೊಂಡಿದ್ದಳು, ನಂತರ*** ನೀನು ಏನು ***ಮಾಡಿದನೋ ಗೊತ್ತಿಲ್ಲ, ಆಕೆ*** ನಿನ್ನನ್ನೆ ***ಮದುವೆ ಆಗುತ್ತೇನೆ ಅಂತ ಹೇಳಿದಳು,*** ತಾವು ***ಮಂಗಳೂರಿನ ಮಂಗಳಾದೇವಿ ದೇವಸ್ಥಾನದಲ್ಲಿ ಸರಳವಾಗಿ ಮದುವೆ ಮಾಡಿಕೊಟ್ಟಿರುತ್ತೇವೆ, ಸ್ವಲ್ಪ ದಿನ ಮಂಗಳೂರಿನಲ್ಲಿ ವಾಸವಿದ್ದರು, ನಂತರ ಶಿವಮೊಗ್ಗಕ್ಕೆ ಬಂದು ವಾಸ ಇದ್ದರು, ತದನಂತರ ತರೀಕೆರೆ ಹತ್ತಿರದ ಒಂದು ಹಳ್ಳಿಗೆ ಹೋಗಿ ವಾಸವಿದ್ದರು,*** ತನ್ನ ***ಮಗಳಿಗೆ ಒಂದು ಹೆಣ್ಣು ಮಗು ಇತ್ತು,*** ತನ್ನ ***ಮಗಳು ಬಂದು ಹೋಗುತ್ತಿದ್ದಳು,*** ಆರೋಪಿಯಾದ ನೀನು ***ಮದುವೆಯಾದ ಒಂದು – ಒಂದೂವರೆ ವರ್ಷದ ನಂತರ*** ನಿನ್ನ ***ಹೆಂಡತಿ*** ನಿನ್ನ ***ಜೊತೆ ಜಗಳ ಮಾಡಿಕೊಂಡು ಮನೆಯಿಂದ ಹೋಗಿದ್ದಾಳೆ ಮನೆಗೆ ಬಂದಿದ್ದಾಳಾ ಅಂತ ಕೇಳಿದರು, ಇಲ್ಲ ಇಲ್ಲಿಗೆ ಬಂದಿಲ್ಲ ಅಂತ ಹೇಳಿದೆ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 42ಃ ಪ್ರಾ.ಸಾ.27 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನ್ನ ***ಮಗಳು ಕಾಣೆಯಾಗಿರುವ ಬಗ್ಗೆ ನಿನ್ನ ಮೇಲೆ ನಾಳೆ ಬಂದು ದೂರು ಕೊಡುತ್ತೇನೆ ಅಂತ***

***ಹೇಳಿದೆ, ಆದರಂತೆ ಮಾರನೇ ದಿನ ತರೀಕೆರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನಿಪಿ-35*** ರಂತೆ ***ಕೊಟ್ಟಿರುತ್ತೇನೆ, ಸಾಗರ ಪೊಲೀಸ್ ಠಾಣೆಯವರು ಮಗಳು ಇಲ್ಲಿ ಇದ್ದಾರೆ ಬಂದು ಕರೆದುಕೊಂಡು ಹೋಗಿ ಅಂತ ಹೇಳಿದರು, ಅಲ್ಲಿಗೆ ಹೋಗಿ ನೋಡಿದಾಗ ಆಕೆ ಮೃತಪಟ್ಟಿದ್ದಳು, ಆಕೆಯ ಶವವನ್ನು ತೋರಿಸಿದರು, ಸಾಕ್ಷಿ ತನ್ನ ಮಗಳ ಬಟ್ಟೆಯನ್ನು ಮು.ಮಾ.1 ಮತ್ತು 2 ಅಂತ*** ಮತ್ತು ***ಮಗಳ ಮಂಗಳಸೂತ್ರ, ಕಾಲುಂಗುರ, ಕಾಲುಚೈನು ಗುರುತಿಸಿದೆನು, ಆರೋಪಿತರಾದ*** ನೀವು ತನ್ನ ***ಮಗಳನ್ನು ಕುತ್ತಿಗೆ ಹಿಸುಕಿ ಸಾಯಿಸಿದ್ದಾರೆ ಅಂತ ಗೊತ್ತಾಯಿತು*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **43**ಃ ಪ್ರಾ. ಸಾ. **27** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಿನ್ನ ***ಮಗು ಬಲೆಗಾರ ಗ್ರಾಮದ ಮಾದೇಶ*** ಎನ್ನುವವರ ***ಮನೆಯಲ್ಲಿ ಇತ್ತು, ಆ ಮಗುವನ್ನು ಕರೆದುಕೊಂಡು ಹೋಗಿರುತ್ತೇನೆ, ಆ ಮಗು*** ತನ್ನ ***ಬಳಿ ಇರುತ್ತದೆ, ಸಾಕ್ಷಿ ಮಗಳ ಪೋಟೋವನ್ನು ನಿಪಿ-24*** ರಂತೆ ***ನೋಡಿ ಗುರುತಿಸಿದ್ದು, ಶವದ ಪೋಟೋವನ್ನು ನಿಪಿ-5 ಮತ್ತು 6 ಎಂದು*** ಹಾಗೂ ***ಮು.ಮಾ.7 ರಿಂದ 9 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ*** ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **44**ಃ ಪ್ರಾ.ಸಾ. **28** ಶ್ರೀ ಶಿವರಾಮ್ ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು ಆರು ವರ್ಷಗಳ ಹಿಂದೆ ತನ್ನ ಮಗಳು ಸಿಗಂಧೂರಿಗೆ ಹೋಗಬೇಕಾದರೆ ಆರೋಪಿ ನಿನ್ನ ಪರಿಚಯವಾಗಿತ್ತು, ನೀನು ತನ್ನ ಮಗಳ ಜೊತೆ ಮನೆಗೆ ಬಂದಿದ್ದೆ, ನೀನು ತನ್ನ ಮಗಳನ್ನು ಮದುವೆ ಮಾಡಿಕೊಡಿ ಅಂತ ಕೇಳಿದೆ, ತಮ್ಮ ಮನೆಯ ನೆಲ ಮಣ್ಣಿನ ನೆಲವಾಗಿದ್ದು ನೀನು ತುದಿಗಾಲಿನಲ್ಲಿ ಮನೆ ಒಳಗೆ ನಡೆದರು ಬಡವರಾಗಿದ್ದರಿಂದ ನಿನಗೆ ಹೆಣ್ಣು ಕೊಡಲು ಇಷ್ಟ ಇರಲಿಲ್ಲ ಏಕೆಂದರೆ ಆತ ಶ್ರೀಮಂತ ಅಂತ ಹೇಳಿಕೊಂಡರು, ನಿನಗೆ ಆರು ಎಕರೆ ಜಮೀನು 10 ಲಕ್ಷದ ಬಿಲ್ಡಿಂಗ್ ಇದೆ ಅಂತ ಹೇಳಿದರು, ನಿನಗೆ ವಯಸ್ಸು ಜಾಸ್ತಿಯಾಗಿತ್ತು, ತನ್ನ ಮಗಳು ನಿನಗಿಂತ ಬಹಳ ಚಿಕ್ಕವಳಾಗಿದ್ದಳು, ಆದ್ದರಿಂದ ತಾವು ಕೊಡಲು ಒಪ್ಪಿರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 45ಃ ಪ್ರಾ.ಸಾ. 28 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನ್ನ ಮಗಳ ಮದುವೆ ಬೇಡ ಅಂತ ಹೇಳಿದೆವು, ಅದಕ್ಕೆ ಮೊದಲು ತನ್ನ ಮಗಳು ಒಪ್ಪಿಕೊಂಡಿದ್ದಳು, ನಂತರ ಆತ ಏನು ಮಾಡಿದನೋ ಗೊತ್ತಿಲ್ಲ, ಆಕೆ ಆತನನ್ನೆ ಮದುವೆ ಆಗುತ್ತೇನೆ ಅಂತ ಹೇಳಿದಳು, ತಾವು ಮಂಗಳೂರಿನ ಮಂಗಳಾದೇವಿ ದೇವಾಸ್ಥಾನದಲ್ಲಿ ಸರಳವಾಗಿ ಮದುವೆ ಮಾಡಿಕೊಟ್ಟಿರುತ್ತೇವೆ, ತನ್ನ ಮಗಳಿಗೆ ಒಂದು ಹೆಣ್ಣು ಮಗು ಇತ್ತು ತನ್ನ ಮಗಳು ಬಂದು ಹೋಗುತ್ತಿದ್ದಳು, ನೀನು ಮದುವೆಯಾದ ಒಂದು-ಒಂದೂವರೆ ವರ್ಷದ ನಂತರ ತನ್ನ ಹೆಂಡತಿ ತನ್ನ ಜೊತೆ ಜಗಳ ಮಾಡಿಕೊಂಡು ಮನೆಯಿಂದ ಹೋಗಿದ್ದಾಳೆ ನಿಮ್ಮ ಮನೆಗೆ ಬಂದಿದ್ದಾಳಾ ಅಂತ ತನ್ನನ್ನು ಕೇಳಿದರು, ತಾವು ಇಲ್ಲಿಗೆ ಬಂದಿಲ್ಲ ಅಂತ ಹೇಳಿದೆ ತನ್ನ ಮಗಳು ಕಾಣೆಯಾಗಿರುವ ಬಗ್ಗೆ ನಿನ್ನ ಮೇಲೆ ನಾಳೆ ಬಂದು ದೂರು ಕೊಡುತ್ತೇನೆ ಅಂತ ತನ್ನ ಹೆಂಡತಿ ಹೇಳಿದಳು ಅದರಂತೆ ತನ್ನ ಹೆಂಡತಿ ಮಾರನೆ ದಿನ ತರೀಕೆರೆ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾಳೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 46ಃ ಪ್ರಾ. ಸಾ. 28 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸಾಗರ ಪೋಲಿಸ್ ಠಾಣೆಯವರು ತಮ್ಮ ಮಗಳು ಸತ್ತು ಹೋಗಿದ್ದಾಳೆ ಬನ್ನಿ ಅಂತ ಹೇಳಿದರು ತಾವು ಅಲ್ಲಿಗೆ ಹೋದೆವು ಆಕೆಯ ಶವವನ್ನು ತೋರಿಸಿದರು, ತನ್ನ ಮಗಳ ಬಟ್ಟೆ ಮು.ಮಾ 1 ಮತ್ತು 2 ಆಗಿರುತ್ತವೆ, ಮಗಳ ಮಂಗಳ ಸೂತ್ರ ಕಾಲುಂಗುರ ಕಾಲುಚೈನು, ಆಗಿರುತ್ತವೆ, ಆರೋಪಿತರು ತನ್ನ ಮಗಳನ್ನು ಕುತ್ತಿಗೆ ಹಿಸುಕಿ ಸಾಯಿಸಿದ್ದಾರೆ ಅಂತಾ ಗೊತ್ತಾಯಿತು, ನಿನ್ನ ಮಗು ಬಲೆಗಾರ ಗ್ರಾಮದ ಮಾದೇಶ ಎನ್ನುವವರ ಮನೆಯಲ್ಲಿ ಇತ್ತು, ಆ ಮಗುವನ್ನು ಕರೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 47ಃ ಪ್ರಾ. ಸಾ. 31 ಶ್ರೀ ಎಂ. ಸಿ. ಕುಮಾರ್, ಸಹಾಯಕ ಇಂಜೀನಿಯರ್, ಜಿಲ್ಲಾ ಪಂಚಾಯಿತಿ, ಸಾಗರ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10.10.2011 ರಂದು ಗುನ್ನ ಸ್ಥಳದ ನಕ್ಷೆಯನ್ನು ಮಾಡಿಕೊಂಡುವಂತೆ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಇವರಿಗೆ ಪತ್ರ ಬರೆದಿದ್ದು, ಅವರ ಆದೇಶದ

ಮೇರೆಗೆ ತಾನು ಸ್ಥಳಕ್ಕೆ ದಿನಾಂಕ **17.10.2011** ರಂದು ಭೇಟಿ ಕೊಟ್ಟು ಠಾಣೆಯಿಂದ ಮೂರ್ತಿ ಎಂಬುವವರನ್ನು ಕಳುಹಿಸಿದ್ದರು, ಅವರು ತನಗೆ ಗುನ್ನ ಸ್ಥಳವನ್ನು ತೋರಿಸಿದರು, ತಾನು ಗುನ್ನ ಸ್ಥಳವನ್ನು ಪರಿಶೀಲಿಸಿ ಅಳತೆಗಳನ್ನು ಬರೆದುಕೊಂಡು ನಕ್ಷೆಯನ್ನು ನಿಪಿ.**38** ರಂತೆ ತಯಾರಿಸಿರುತ್ತೇನೆ, ಮೂರ್ತಿ ತೋರಿಸಿದ ಮನೆಯ ಸ್ಕೆಚನ್ನು ತಯಾರಿಸಿ, ನಿಪಿ.**40** ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ, ಆ ಮನೆ ಎಲ್ಲಿ ಬರುತ್ತದೆ ಎಂದು ನಕ್ಷೆಯನ್ನು ನಿಪಿ.**39** ರಂತೆ ತಯಾರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **48**ಃ ಪ್ರಾ. ಸಾ. **32** ಶ್ರೀ ಕೆ.ಅರ್. ಪ್ರಕಾಶ್ ಬೊನ್ ಸ್ಲಾ, ವೈದ್ಯಾಧಿಕಾರಿಗಳು ಇವರು ತಮ್ಮ ಸಾಕ್ಷ್ಯದಲ್ಲಿ ಸಾಗರದ ಗ್ರಾಮಾಂತರ ಠಾಣೆಯವರ ಮನವಿ ಮೇರೆಗೆ ದಿನಾಂಕ 05.07.2011 ರಂದು ರಾತ್ರಿ 9 ರಿಂದ 11.30 ರವರೆಗೆ ಆಸ್ಪತ್ರೆಯ ಶವಗಾರದಲ್ಲಿ ಗುರುತು ಹಚ್ಚಲಾಗದ ಮೃತ ಹೆಂಗಸಿನ ದೇಹವನ್ನು ಪರೀಕ್ಷೆಗಾಗಿ ತಂದಿದ್ದರು, ತಾನು ಸದರಿ ಮೃತ ದೇಹದ ಪರೀಕ್ಷೆಯನ್ನು ಮಾಡಿರುತ್ತೇನೆ, ಸದರಿ ಮೃತ ದೇಹವು ಕೊಳೆತ ಸ್ಥಿತಿಯಲ್ಲಿತ್ತು ಅದರ ಬಣ್ಣ ಬದಲಾವಣೆಯಾಗಿತ್ತು, ದೇಹದ ಮಾಂಸ ಅಲ್ಲಲ್ಲಿ ಕೊಳೆತು ಹೋಗಿತ್ತು, ಮುಖದ ಮತ್ತು ತಲೆಯ ಭಾಗದ ಮೂಳೆ ಹೊರಗೆ ಕಾಣುತ್ತಿತ್ತು, ಮುಂದಿನ ಬಾಚಿ ಹಲ್ಲುಗಳು ಬಿದ್ದು ಹೋಗಿದ್ದವು, ತಲೆಯನ್ನು ಅಲ್ಲಾಡಿಸಿದಾಗ ಉಳಿದ ಹಲ್ಲುಗಳು ಬಿದ್ದು ಹೋಗುವ ಸ್ಥಿತಿಯಲ್ಲಿ ಇದ್ದವು, ಮೂರನೇ ದವಡೆ ಹಲ್ಲು ಎಡಭಾಗದ ಕೆಳಭಾಗದ ದವಡೆಯಲ್ಲಿ ಇತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **49**ಃ ಪ್ರಾ. ಸಾ. **32** ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಮೆದುಳು ಕೊಳೆತು ನೀರಾಗಿ ಕಣ್ಣಿನ ಜಾಗದಿಂದ ಹೊರಗೆ ಬರುತ್ತಿತ್ತು ದೇಹದ ಎಲ್ಲಾ ರಂಧ್ರಗಳ ಬಳಿ ಹುಳುಗಳು ಇದ್ದವು, ಕಂಕಳು ಮತ್ತು ಕುಂಡಿಯ ಭಾಗದಲ್ಲಿ ಹುಳುಗಳು ಇದ್ದವು, ಬೆನ್ನಿನ ಮೇಲ್ಭಾಗದಲ್ಲಿ ಕುತ್ತಿಗೆಯ ಕೆಳಭಾಗದಲ್ಲಿ **6:2:2** ಸೇಂಟಿ ಮೀಟರ್ ವಿಸ್ತೀರ್ಣದಲ್ಲಿ ಕತ್ತರಿಸಿದಂತೆ ಗಾಯವಿತ್ತು, ಅಲ್ಲಿ ಮಾಂಸ ಕಪ್ಪಾಗಿ ಕೊಳೆತಿತ್ತು, ಹುಳುಗಳು ಇದ್ದವು, ಕುತ್ತಿಗೆ ಮತ್ತು ಎರಡು ಕೈಗಳಲ್ಲಿ ಹಗ್ಗ ಕಟ್ಟಿದಂತೆ

ಗುರುತುಗಳು ಇದ್ದವು, ಎಡಗೈನಲ್ಲಿ ಮೂಳೆಗಳು ಮಾತ್ರ ಇದ್ದವು, ತಲೆ ಬುರುಡೆ ಸಹಜಸ್ಥಿತಿಯಲ್ಲಿ ಇತ್ತು, ಮೆದುಳಿನ ಪೊರೆ ಕೊಳೆತು ನೀರಾಗಿತ್ತು, ಮೆದುಳು ನೀರಾಗಿ ಹೊರಗೆ ಬಂದಿತ್ತು, ಪಕ್ಕೆಯ ಎಲುಬುಗಳು ಯಥಾಸ್ಥಿತಿಯಲ್ಲಿ ಇತ್ತು, ಆದರ ಮಾಂಸಖಂಡ ಕೊಳೆತು ಕಪ್ಪಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 50ಃ ಪ್ರಾ.ಸಾ.32 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಶ್ವಾಸಕೋಶಗಳು ಕಂದು ಬಣ್ಣದ ಮಾಂಸದ ಮುದ್ದೆಯಾಗಿತ್ತು, ಶ್ವಾಸಕೋಶದ ಸುತ್ತುವರೆದ ಮಾಂಸದ ಪೊರೆ ಕರಗಿ ಹೋಗಿತ್ತು, ಹೃದಯ ಮೆದುವಾಗಿ ಮುದ್ದೆಯಾಗಿತ್ತು, ಹೊಟ್ಟೆಯಲ್ಲಿ ಆಹಾರದ ಅಂಶ ಕಂಡುಬಂತು, ಮೂತ್ರ ಜನಕಾಂಗ ಮತ್ತು ಮೂತ್ರ ಕೋಶ ಮುದ್ದೆಯಾಗಿತ್ತು, ಅಂತರಾಳಗಳನ್ನು ತೆಗೆದು ಪರೀಕ್ಷೆಗಾಗಿ ಪ್ರತ್ಯೇಕವಾಗಿ ಕಳುಹಿಸಲಾಗಿದೆ, ಜನನಿಯಂದ್ರದ ಹೊರಭಾಗದ ಕೂದಲು ಮತ್ತು ಸ್ವಾಬ್ ನ್ನು ಶೇಖರಿಸಿ ತಲೆ ಬುರುಡೆ ಮತ್ತು ದವಡೆಯನ್ನು ಬೇರ್ಪಡಿಸಿ ಫಾರ್ಮಲಿನ್ ನಲ್ಲಿ ಶೇಖರಿಸಿ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 51ಃ ಪ್ರಾ. ಸಾ. 32 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಕುತ್ತಿಗೆಯ ಭಾಗವನ್ನು ಪೆತಾಲಜಿ ವಿಭಾಗಕ್ಕೆ ತೆಗೆದು ಕಳುಹಿಸಿರುತ್ತೇನೆ, ದೇಹದಲ್ಲಿ ಇದ್ದ ಹುಳುಗಳನ್ನು ಸಂಗ್ರಹಿಸಿ ಯಂಟಮಾಲಜಿ ಪರೀಕ್ಷೆಗಾಗಿ ಕಳುಹಿಸಿಕೊಟಪ್ಪಿರುತ್ತೇನೆ, ಪೋಲಿಸರು ಮನವಿಯಲ್ಲಿ ಶವದ ವಯಸ್ಸನ್ನು ಕೇಳಿದರು, ಆ ಮಹಿಳೆಯ ವಯಸ್ಸು 20 ರಿಂದ 25 ಇರಬಹುದು ಎಂದು ಉತ್ತರಿಸಿರುತ್ತೇನೆ, ಮೃತಳ ಸಾವು 8 ರಿಂದ 15 ದಿನಗಳ ಹಿಂದೆ ಆಗಿರುವ ಸಾಧ್ಯತೆ ಇದೆ, ದೇಹದ ಮೇಲಿನ ಗಾಯಗಳು ಕೊಳೆತಿರುವುದರಿಂದ ಅವುಗಳು ಮರಣಕ್ಕೂ ಪೂರ್ವದಲ್ಲಿ ಆಗಿದೆಯೋ ಇಲ್ಲವೊ ಎಂದು ಹೇಳಲು ಅಗುವುದಿಲ್ಲವೆಂದು ತಿಳಿಸಿರುತ್ತೇನೆ, ಮೃತಳ ಶ್ವಾಸಕೋಶದಲ್ಲಿ ನೀರು ಇದೆಯೇ ಎಂದು ಕೇಳಿದರು, ಇಲ್ಲ ಎಂದು ತಿಳಿಸಿರುತ್ತೇನೆ, ಮೃತಳ ದೇಹದ ಮೇಲೆ ಸಂಭೋಗ ಕ್ರಿಯೆ ಆದ ಬಗ್ಗೆ ಕೇಳಿದ್ದು, ದೇಹವು ಕೊಳೆತಿದ್ದರಿಂದ ಹೇಳಲು ಆಗುವುದಿಲ್ಲವೆಂದು ತನ್ನ ಅಭಿಪ್ರಾಯನ್ನು ತಿಳಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 52ಃ ಪ್ರಾ.ಸಾ.32 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ತನ್ನ ಮುಂದೆ ನಿಪಿ.42, 43 ಮತ್ತು 44 ರಂತೆ ಹಾಜರುಪಡಿಸಿದ್ದು, ದಾವಣಗೆರೆಯಿಂದ ಬಂದ ಪ್ರಕಾರ ಸೆಮಿನಲ್ ಸ್ಟೈನ್ ಇರುವುದಿಲ್ಲವೆಂದು ತಿಳಿಸಿರುತ್ತಾರೆ, ಸದರಿ ದೇಹದ ಮೇಲೆ ಬೇರೆಯವರ ಕೂದಲುಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ, ಹುಳಗಳ ವಯಸ್ಸು 7 ರಿಂದ 8 ದಿವಸಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ, ದಾವಣೆಗೆರೆಯ ಎಫ್.ಎಸ್.ಎಲ್ ವರದಿಯ ಪ್ರಕಾರ ವಿಷದ ಅಂಶಗಳು ಕಂಡು ಬಂದಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 53ಃ ಪ್ರಾ. ಸಾ. 32 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಶಿವಮೊಗ್ಗದ ಆಸ್ಪತ್ರೆಯಿಂದ ಬಂದ ವರದಿಯ ಪ್ರಕಾರ ಕುತ್ತಿಗೆಯಲ್ಲಿ ಮರಣಪೂರ್ವ ಗಾಯ ಮತ್ತು ಮೂಳೆ ಮುರಿತ ಆಗಿಲ್ಲವೆಂದು ತಿಳಿಸಿರುತ್ತಾರೆ, ಶವವು ಕೊಳೆತ ಸ್ಥಿತಿಯಲ್ಲಿ ಇದ್ದುದರಿಂದ ನಿಖರವಾದ ಸಾವಿನ ಕಾರಣವನ್ನು ಕೊಡಲಾಗುವುದಿಲ್ಲವೆಂದು ಅಭಿಪ್ರಾಯ ಪಟ್ಟು ಶವ ಪರೀಕ್ಷಾ ವರದಿಯನ್ನು ನಿಪಿ.41 ರಂತೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 54ಃ ಪ್ರಾ. ಸಾ. 33 ಶ್ರೀ ಭದ್ರಾಚಾರಿ ಇವರು ತಮ್ಮ ಸಾಕ್ಷ್ಯದಲ್ಲಿ ತನಗೆ ತೋರಿಸಿದ ಅಸೆಸ್ಮೆಂಟ್ ಎಕ್ಸ್ಟ್ರಾಕ್ಟ್ ನ್ನು ನಿಪಿ.45 ರಂತೆ ನೀಡಿದ್ದು, ಅದರ ಆಸ್ತಿಯ ಸಂಖ್ಯೆ 147 ಆಗಿರುತ್ತದೆ, ಕೃಷ್ಣಮೂರ್ತಿ ಯವರ ಹೆಸರಿನಲ್ಲಿ ಇರುತ್ತದೆ, ಅದು ಆರ್.ಸಿ.ಸಿ ಮನೆಯಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 55ಃ ಪ್ರಾ. ಸಾ. 34 ಶ್ರೀ ಹೆಚ್ ಎಸ್ ಸುರೇಶ್ ವೃತ್ತ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 14.09.2011 ರಂದು ತಮ್ಮ ಠಾಣೆಯ ಹೆಚ್.ಸಿ 59 ರಾಜಪ್ಪ

ಇವರು ಶಿವಮೊಗ್ಗ ಜಿಲ್ಲೆ ಸಾಗರದ ಗ್ರಾಮಾಂತರ ಠಾಣೆಯಿಂದ ವರ್ಗಾವಣೆಯಾಗಿ ಬಂದ ಮೊಕದ್ದಮೆ ಸಂಖ್ಯೆ 210ಃ2011 ಕಡತವನ್ನು ಹಾಜರುಪಡಿಸಿದ್ದು, ಸದರಿ ಕಡತವನ್ನು ಸ್ವೀಕರಿಸಿ ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ 209ಃ2011 ಕಲಂ 120 ಬಿ, 302, 404, 201 ಸಹಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ, ನಂತರ ವರ್ಗಾವಣೆಯಾಗಿ ಬಂದ ಕಡತವನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 56ಃ ಪ್ರಾ. ಸಾ. 34 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿ ಮೃತೆ ಮಹಾಲಕ್ಷ್ಮಿ ಕಾಣೆಯಾಗಿರುವ ಬಗ್ಗೆ ಅವರ ತಾಯಿ ಶ್ರೀಮತಿ ಲೋಲಾಕ್ಷಿಯವರು ದಿನಾಂಕ 24.06.2011 ರಂದು ತರೀಕೆರೆ ಠಾಣೆಗೆ ಹಾಜರಾಗಿ ನಿಪಿ.35 ರಂತೆ ಪಿರ್ಯಾದು ನೀಡಿದ್ದು, ಅದರಂತೆ ಠಾಣಾ ಮೊಕದ್ದಮೆ ಸಂಖ್ಯೆ 133ಃ2011 ಹೆಂಗಸು ಕಾಣೆಯಾದ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.46 ರಂತೆ ಠಾಣೆಯ ಠಾಣಾಧಿಕಾರಿಯಾಗಿದ್ದ ಎಎಸ್ಐ ಲಿಂಗಣ್ಣಯ್ಯ ದಾಖಲು ಮಾಡಿಕೊಂಡಿರುತ್ತಾರೆ, ಸದರಿ ಲಿಂಗಣ್ಣನವರು ಮೃತಪಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 57ಃ ಪ್ರಾ. ಸಾ. 34 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 14.09.2011 ರಂದು ಸಾಕ್ಷಿದಾರರಾದ ಎಂ.ಸಿ ಹಳ್ಳಿಯ ರಾಯಪ್ಪಗೌಡ ಇವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ, ದಿನಾಂಕ 10.10.2011 ರಂದು ಎಂ.ಸಿ ಹಳ್ಳಿಯ ನಿವಾಸಿ ರಾಮೇಗೌಡ ಬಿನ್ ದುರ್ಗೇಗೌಡರ ಹೇಳಿಕೆಯನ್ನು ಹಾಗೂ ದಿನಾಂಕ 11.10.2011 ರಂದು ರಾಜಪ್ಪ ಇವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ, ದಿನಾಂಕ 10.11.2011 ರಂದು ಈ ಪ್ರಕರಣದಡಿಯಲ್ಲಿ ತನಿಖೆಯನ್ನು ಪೆಂಡಿಂಗ್ ಇಟ್ಟು, ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ, ಡಿ.ಡಿ.ರಾಮೇಗೌಡ ನಿಪಿ.37 ರಂತೆ ಹೇಳಿಕೆಯನ್ನು ಕೊಟ್ಟಿರುತ್ತಾರೆ, ನಂತರ ತನಿಖೆಯನ್ನು ಮುಂದುವರೆಸಿ ದಿನಾಂಕ 22.11.2011 ರಂದು ತರೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಪಂಚರಾದ ರಮೇಶ ನಾಗರಾಜ್ ಸ್ವಾಮಿ ದೇವಾನಂದ ರವರ ಸಮಕ್ಷಮ ಮೃತ ಮಹಾಲಕ್ಷ್ಮಿ

ಇವರ ತಾಯಿ ಲೋಲಾಕ್ಷಿ ಇವರ ರಕ್ತವನ್ನು ಮಾದರಿಗಾಗಿ ವೈದ್ಯಾಧಿಕಾರಿಗಳಿಂದ ಸಂಗ್ರಹಿಸಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 58ಃ ಪ್ರಾ.ಸಾ. 34 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ತನಿಖೆಯನ್ನು ಮುಂದುವರೆಸಿ ದಿನಾಂಕ 22.11.2011 ರಂದು ತರೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಪಂಚರಾದ ರಮೇಶ ನಾಗರಾಜ್ ಸ್ವಾಮಿ ದೇವಾನಂದ ರವರ ಸಮಕ್ಷಮ ಮೃತ ಮಹಾಲಕ್ಷ್ಮಿ ಇವರ ತಾಯಿ ಲೋಲಾಕ್ಷಿ ಇವರ ರಕ್ತವನ್ನು ಮಾದರಿಗಾಗಿ ವೈದ್ಯಾಧಿಕಾರಿಗಳಿಂದ ಸಂಗ್ರಹಿಸಿಕೊಂಡು ಪಂಚರ ಸಮಕ್ಷಮ ನಿಪಿ.48 ರಂತೆ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡಿರುತ್ತೇನೆ, ಅದೇ ದಿನ ಲೋಲಾಕ್ಷಿ ಪಡಿತರ ಚೀಟಿಯನ್ನು ನಿಪಿ.50 ರಂತೆ ಹಾಜರುಪಡಿಸಿದ್ದು, ಅದನ್ನು ಪಂಚರಾದ ಟಿ.ಎಂ. ರಘು ಮತ್ತು ಮಂಜುನಾಥ ಇವರ ಸಮಕ್ಷಮ ನಿಪಿ.49 ಮಹಜರನಡಿ ಠಾಣೆಯಲ್ಲಿ ಅಮಾನತು ಪಡಿಸಿಕೊಂಡಿರುತ್ತೇನೆ, ಅವುಗಳನ್ನು ಮಾಲು ಪಟ್ಟಿಯಲ್ಲಿ ದಾಖಲಿಸಿ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 59ಃ ಪ್ರಾ.ಸಾ. 34 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 03.01.2012 ರಂದು ವಿಧಿ ವಿಜ್ಞಾನ ಸಂಸ್ಥೆ ದಾವಣಗೆರೆಗೆ ಮೃತೆ ಮಹಾಲಕ್ಷ್ಮಿ ಇವರ ತಲೆ ಬುರುಡೆ ಲೋಲಾಕ್ಷಿ ಇವರ ರಕ್ತ ಮಾದರಿಯನ್ನು ಕಳುಹಿಸಿಕೊಟ್ಟಿರುತ್ತೇನೆ, ದಿನಾಂಕ 03.12.2011 ರಂದು ಮೃತೆ ಮಹಾಲಕ್ಷ್ಮಿ ಇವರಿಗೆ ಸಂಭಂಧಿಸಿದ ಅಂಕಪಟ್ಟಿಗಳನ್ನು ಕೀರ್ತಿ ಫೈನಾನ್ಸ್ ರವರು ನಿಪಿ.52 ರಿಂದ 59 ರಂತೆ ಹಾಜರುಪಡಿಸಿದ್ದು, ಸದರಿ ಅಂಕಪಟ್ಟಿಯನ್ನು 1 ನೇ ಆರೋಪಿ ನೀನು ಅಡವಿಟ್ಟು ಸಾಲ ಪಡೆದಿದ್ದಾನೆ ಎಂದು ತಿಳಿಸಿದರು, ಅವುಗಳನ್ನು ನಿ.ಪಿ 51 ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡು, ಪಂಚರಾದ ಆಶೋಕ್ ಕುಮಾರ, ರಮೇಶ್ ಚಂದ್ರ ಇವರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ, ದಿನಾಂಕ 07.06.2014 ರಂದು ಡಿಎನ್ಎ ವರದಿಯನ್ನು ನಿ.ಪಿ 50 ರಂತೆ ಸ್ವೀಕರಿಸಿದ್ದೇನೆ, ನಂತರ ದಿನಾಂಕ 09.06.2014 ರಂದು ಈ ಪ್ರಕರಣದ ತನಿಖೆ ಸಂಪೂರ್ಣವಾಗಿ ಮುಕ್ತಾಯವಾಗಿದ್ದರಿಂದ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 60ಃ ಪ್ರಾ. ಸಾ. 36 ಶ್ರೀ ಸೀತಾರಾಮ್ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 05.07.2011 ರಂದು 3 ಗಂಟೆಗೆ ಪಿರ್ಯಾದುದಾರನಾದ ಶ್ರೀ ವೆಂಕಪ್ಪಗೌಡ ಇವರಿಂದ ಉಳ್ಳೂರು ಗ್ರಾಮದ ಕೆರೆಯ ಬಳಿ ನಿಪಿ.2 ರಂತೆ ಪಿರ್ಯಾದನ್ನು ಸ್ವೀಕರಿಸಿ, ನಂತರ ಠಾಣೆಗೆ ವಾಪಾಸ್ಸಾಗಿ 3.15 ಗಂಟೆಗೆ ಠಾಣಾ ಗುನ್ನ ನಂ.210ಃ2011 ರಲ್ಲಿ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.62 ರಂತೆ ಕಳುಹಿಸಿಕೊಟ್ಟಿರುತ್ತೇನೆ, ಈ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಯನ್ನು ಸಿಪಿಐ ಇವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 61ಃ ಪ್ರಾ. ಸಾ. 36 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 06.07.2011 ರಂದು ವೃತ್ತ ನಿರೀಕ್ಷಕರ ಸೂಚನೆ ಮೇರೆಗೆ ಮೃತರ ಸಂಸ್ಕಾರ ಮಾಡಲು ಸಾಗರ ರಸ್ತೆಯಲ್ಲಿ ರುದ್ರಭೂಮಿಯಲ್ಲಿ ಪಂಚರಾದ ಲೋಕೇಶ್ ಮತ್ತು ಕುಮಾರ್ ಗೌಡ ಪುರಸಭೆ ಮಣಿಕಂಠ ಮತ್ತು ನಟರಾಜ ಇವರ ಸಮಕ್ಷಮ 7.30 ರಿಂದ 8 ಗಂಟೆ ವರೆಗೆ ಸಂಸ್ಕಾರ ವಿಧಿ ವಿಧಾಗಳನ್ನು ನೆರವೇರಿಸಲಾಯಿತು ಹಾಗೂ ಅದರ ವಿಡಿಯೋ ಚಿತ್ರೀಕರಣ ಮಾಡಿ ವರದಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 62ಃ ಪ್ರಾ. ಸಾ. 37 ಶ್ರೀ ಮಾದಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05-07-2011 ರಂದು ಈ ಪ್ರಕರಣದ ಕಡತವನ್ನು ಸಾಗರ ಗ್ರಾಮಾಂತರ ಠಾಣೆಯ ಪಿ.ಎಸ್.ಐ ರವರಿಂದ ಪಡೆದುಕೊಂಡಿರುತ್ತೇನೆ ಹಾಗೂ ಅಲ್ಲಿಯವರೆಗೆ ನಡೆದ ತನಿಖೆಯನ್ನು ಪರಿಶೀಲಿಸಿರುತ್ತೇನೆ, ನಂತರ ಈ ಪ್ರಕರಣದ ತನಿಖೆಯನ್ನು ಮುಂದುವರಿಸಿ, ಕೆರೆಯ ನೀರಿನಲ್ಲಿದ್ದ ಹೆಣವನ್ನು ಶ್ರೀ ತಿಮ್ಮಣ್ಣ ಬಿನ್ ಪ್ರಕಾಶ ರವರಿಂದ ಮೇಲಕ್ಕೆ ಎತ್ತಿಸಿ, ಸ್ಥಳಕ್ಕೆ ಪಂಚರಾಗಿ ಶ್ರೀನಿವಾಸ ಹಾಗೂ ರಾಮು ಮತ್ತು ಪ್ರಕಾಶ ಇವರುಗಳನ್ನು ಬರಮಾಡಿಕೊಂಡು, ಇವರ ಸಮಕ್ಷಮ 4 ಅಡಿ ಆಳದ ನೀರಿನಲ್ಲಿ ಪೂರ್ವಕ್ಕೆ ತಲೆ ಮತ್ತು ಪಶ್ಚಿಮಕ್ಕೆ ಕಾಲು ಇದ್ದ ಮೃತಳ ಶವವನ್ನು ಹಾಗೂ ಅದರಿಂದ 20 ಅಡಿ ದೂರದಲ್ಲಿದ್ದಂತಹ ಕೆಎ-14 -ಹೆಚ್ 4447 ನೇ ನೊಂದಣಿ ಸಂಖ್ಯೆಯ ಲೂನಾ ದ್ವಿಚಕ್ರ ವಾಹನವನ್ನು ನೀರಿನಿಂದ ಮೇಲಕ್ಕೆ ತೆಗೆದ ಬಗ್ಗೆ

ಮಧ್ಯಾಹ್ನ 3.30 ರಿಂದ 4.15 ರವರೆಗೆ ಪಂಚನಾಮೆಯನ್ನು ನಿ.ಪಿ.3 ರಂತೆ ಜರುಗಿಸಿರುತ್ತೇನೆ, ನಂತರ ಮೃತ ದೇಹ ಮತ್ತು ವಾಹನದ ಫೋಟೋ ಗಳನ್ನು ಸ್ಥಳದಲ್ಲಿ ನಿ.ಪಿ. 4 ರಿಂದ ನಿ.ಪಿ. 6 ರಂತೆ ತೆಗೆದಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 63ಃ ಪ್ರಾ.ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಮಧ್ಯಹ್ನ 3.30 ರಿಂದ 4.15 ರವರೆಗೆ ಪಂಚನಾಮೆ ಕಾಲದಲ್ಲಿ ವೀಡಿಯೋ ಚಿತ್ರೀಕರಣವನ್ನು ಸಹಾ ಛಾಯಾಚಿತ್ರಣದೊಂದಿಗೆ ನಡೆಸಿರುತ್ತೇನೆ, ಸ್ಥಳದ ಕಚ್ಚಾ ನಕಾಶೆಯನ್ನು ನಿ.ಪಿ.63 ರಂತೆ ತಯಾರಿಸಿದ್ದು, ನಂತರ ಮೊದಲು ಹೇಳಿದ ಪಂಚರ ಸಮಕ್ಷಮ ಮೃತಳ ಮರಣೋತ್ತರ ಪರೀಕ್ಷೆಯನ್ನು ಜರುಗಿಸಿದ್ದು, ಮೃತಳು ಸುಮಾರು 30 ರಿಂದ 35 ವರ್ಷ ವಯಸ್ಸಿನವಳು ಇದ್ದಿರಬಹುದು, ನಂತರ ಅದೇ ಸಾಕ್ಷಿದಾರರ ಸಮಕ್ಷಮ ನಿ.ಪಿ. 10 ರಂತೆ ಶವ ಪಂಚನಾಮೆಯನ್ನು ಸಂಜೆ 4.15 ರಿಂದ 6.15 ರವರೆಗೆ ಜರುಗಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 64ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ಕಾಲದಲ್ಲಿ ಸ್ಥಳದಲ್ಲಿ ತಿಮ್ಮಣ್ಣ, ಅಶೋಕ, ಪ್ರವೀಣ, ರಾಘವೇಂದ್ರ, ಗೋವಿಂದ, ನಾಗರಾಜ ಇವರುಗಳನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ತಿಮ್ಮಣ್ಣರವರು ತನ್ನ ಮುಂದೆ ನಿ.ಪಿ. 11 ರಂತೆ, ಪ್ರವೀಣ ನಿ.ಪಿ. 12 ರಂತೆ, ರಾಘವೇಂದ್ರ ನಿ.ಪಿ. 13 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ, ಮೃತಳ ಸಾವಿನ ಬಗ್ಗೆ ಯಾರೋ ದುರಾತ್ಮರು ಆಕೆಯನ್ನು 10 ರಿಂದ 15 ದಿನಗಳ ಹಿಂದೆ ಯಾವುದೋ ಉದ್ದೇಶದಿಂದ ಯಾವುದೋ ಆಯುಧದಿಂದ ಹಲ್ಲೆ ಮಾಡಿ ಕೊಲೆ ಮಾಡಿ ಸಾಕ್ಷಿ ನಾಶಪಡಿಸುವ ಉದ್ದೇಶದಿಂದ ಆಕೆಯ ಕೈಗಳನ್ನು ಮಡಚಿ ಎದೆಯ ಮೇಲಿಟ್ಟು , ಪ್ಲಾಸ್ಟಿಕ್ ಹಗ್ಗ ಕಟ್ಟಿ ಬೈಕ್ ಸಮೇತ ಹುಲ್ಲೂರು ಕೆರೆಯ ನೀರಿಗೆ ತಂದು ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 65ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ

ನಂತರ ಮೃತಳ ಶವವನ್ನು ವೈದ್ಯಕೀಯ ಮರಣೋತ್ತರ ಪರೀಕ್ಷೆಯ ಸಲುವಾಗಿ ಮಹಿಳಾ ಪಿಸಿ **1660** ರವರ ಮುಖಾಂತರ ಸಾಗರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ, ಮರಣೋತ್ತರ ಪರೀಕ್ಷೆ ಆದ ನಂತರ ಮೃತಳ ಶವ ಸಂಸ್ಕಾರವನ್ನು ಸಾಗರ ನಗರ ಸಭೆಯ ಮೂಲಕ ನಿಯಮಾನುಸಾರ ಪಿ.ಎಸ್ಐ.ರವರ ಸಮಕ್ಷಮದಲ್ಲಿ ಜರುಗಿಸುವಂತೆ ಸೂಚಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **66**ಃ ಪ್ರಾ. ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಮಹಿಳಾ ಪಿಸಿ **1660** ರವರು ವೈದ್ಯರಿಂದ ದೊರೆತಂತಹ ಮೃತಳ ಮೈ ಮೇಲಿದ್ದ ಬಟ್ಟೆಗಳನ್ನು ನಿ.ಪಿ.**14** ವರದಿಯೊಂದಿಗೆ ಎಂ.ಓ **1** ರಿಂದ ಎಂ.ಓ.**4** ರಂತೆ ಚೂಡಿದಾರ್ ಟಾಪನ್ನು, ಪ್ಯಾಂಟನ್ನು, ಒಂದು ಕಾಚ, ಮತ್ತು ಹಳದಿ ಬಣ್ಣದ ಪ್ಲಾಸ್ಟಿಕ್ ದಾರ ಇವುಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಅಮಾನತ್ತುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **67**ಃ ಪ್ರಾ.ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಕಛೇರಿಗೆ ವಾಪಾಸಾದ ನಂತರ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ, ನಂತರ ಕರ್ನಾಟಕ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಮೃತ ದೇಹದ ಚಹರೆಯನ್ನು ನೀಡಿ, ಸದರಿ ಚಹರೆಯ ಮಹಿಳೆ ಯಾರಾದರೂ ಕಾಣೆಯಾಗಿದ್ದರೆ ಮಾಹಿತಿ ನೀಡುವಂತೆ ಇ ಮೇಲ್ ಸಂದೇಶ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **68**ಃ ಪ್ರಾ. ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ **06-07-2011** ರಂದು ಸಾಗರ ಗ್ರಾಮಾಂತರ ಠಾಣೆಯ ಪಿ.ಎಸ್.ಐ ರವರು ಮೃತ ದೇಹವನ್ನು ದಫನ್ ಮಾಡಿದ ಬಗ್ಗೆ ಮಹಜರ್ ನ್ನು ನಿ.ಪಿ. **1** ರಂತೆ ಹಾಜರು ಮಾಡಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ಸಿಬ್ಬಂದಿಯವರ ಮೂಲಕ ಆರೋಪಿತರ ಪತ್ತೆಗೆ ಪ್ರಯತ್ನ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 69ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 07-07-2011 ರಂದು ಶಿವಮೊಗ್ಗ ಆರ್.ಟಿ.ಓ ಕಛೇರಿಯಿಂದ ಮತ್ತು ರವಿ ಆಟೋ ಮೊಬೈಲ್ಸ್ ನಿಂದ ಎಂ.ಓ .5 ಲೂನಾಗೆ ಸಂಬಂಧಪಟ್ಟ ಬಿ ಎಕ್ಸ್ ಟ್ರಾಕ್ಟ್ ಫಾರಂ ಅನ್ನು ನಿ.ಪಿ. 64 ಮತ್ತು ನಿ.ಪಿ. 65 ರಂತೆ ತಂದಿದ್ದು, ಅದರ ಮಾಲೀಕರು ಕೆ.ಎಂ.ಪರಮೇಶ್ವರಪ್ಪ ಬಿನ್ ಮಾದೇಗೌಡ, ಶರಾವತಿನಗರ, ಶಿವಮೊಗ್ಗ ಎಂದು ತಿಳಿದು ಬಂದಿರುತ್ತದೆ, ಈ ಪ್ರಕರಣದಲ್ಲಿ ಡಿಸಿಆರ್.ಬಿ, ಶಿವಮೊಗ್ಗದವರ ಆದೇಶದಂತೆ ಕ್ರಿಮಿನಲ್ ಗೆಜೆಟ್ ನಲ್ಲಿ ಪ್ರಕಟಿಸಲು ಎನ್. ಸಿ. ಆರ್. ಬಿ, ಬೆಂಗಳೂರು ಇವರಿಗೆ ಇ-ಮೇಲ್ ಸಂದೇಶವನ್ನು ಕಳುಹಿಸಿರುತ್ತೇನೆ, ಹಾಗೂ ಎಲ್ಲಾ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ವಿವರವನ್ನು ನೀಡಿರುತ್ತೇನೆ, ಹಾಗೂ ಮೃತಳ ಭಾವಚಿತ್ರವನ್ನು ಮಂಗಳೂರು, ಬೆಂಗಳೂರು, ಭದ್ರಾವತಿ, ಧಾರವಾಡ, ಮೈಸೂರು ಗಳಿಗೆ ಕಳುಹಿಸಿ ಪ್ರಚಾರ ನೀಡಲು ಕೋರಿರುತ್ತೇನೆ, ಈ ಪ್ರಕರಣದಲ್ಲಿ ಆರೋಪಿತರ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಿಸಿರುತ್ತೇನೆ, ಹಾಗೂ ನಿರಂತರ ಪ್ರಯತ್ನ ನಡೆಸಿರುತ್ತೇನೆ ಹಾಗೂ ಹಲವರ ವಿಚಾರಣೆಯನ್ನು ನಡೆಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 70ಃ ಪ್ರಾ.ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 13-07-2011 ರಂದು ಪ್ರಕರಣದ ತನಿಖೆಯನ್ನು ಮುಂದುವರಿಸಿ ಸಾಕ್ಷಿದಾರರಾದ ಪರಮೇಶ್ವರ, ಚಿನ್ನಪ್ಪಗೌಡ ಮತ್ತು ಸುನಿಲ್ ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ, ದಿನಾಂಕಃ 14-07-2011 ರಂದು ಸಾಕ್ಷಿದಾರರಾದ ಬೋಜರಾಜ, ರಾಘವೇಂದ್ರ, ಮತ್ತು ರಾಮುರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ದಿನಾಂಕಃ 24-07-2011 ರಂದು ಸಾಕ್ಷಿದಾರರಾದ ಶ್ರೀಮತಿ ನೂರ್ ಜಾನ್ ಮತ್ತು ಇಮ್ತಿಯಾಜ್ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ದಿನಾಂಕಃ 28-07-2011 ರಂದು ಚಾಸಾ-16 ರವರು ಪ್ರಕರಣಕ್ಕೆ ಸಂಬಂಧಿಸಿದ ಮೃತಳ ದೇಹದ ಉದರದ ಭಾಗ, ಮರ್ಮಾಂಗ ಭಾಗ, ಹಾಗೂ ಇತರೆ ಭಾಗಗಳನ್ನು ವೈದ್ಯಾಧಿಕಾರಿಗಳು ಸಂಗ್ರಹಿಸಿಕೊಟ್ಟಿರುವುದನ್ನು ತಂದು ಹಾಜರು ಮಾಡಿರುತ್ತಾರೆ ಹಾಗೂ

ಅವುಗಳನ್ನು ದಿನಾಂಕಃ **30-07-2011** ರಂದು ಮನವಿಯೊಂದಿಗೆ ಪಿಸಿ**1561** ರಾಘವೇಂದ್ರರವರ ಮೂಲಕ ದಾವಣಗೆರೆಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **71**ಃ ಪ್ರಾ. ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ **6** ವಿವಿಧ ಪ್ರಶ್ನೆಗಳಿಗೆ ಉತ್ತರವನ್ನು ಕೋರಿ ಪಿಸಿ **1561** ರವರ ಮೂಲಕ ಸಮಯುಚಿತ ಮಾರ್ಗದ ಮೂಲಕ ವೈದ್ಯರಲ್ಲಿಗೆ ಮನವಿ ಪತ್ರ ಕಳುಹಿಸಿರತ್ತೇನೆ, ಮೃತಳ ಕುತ್ತಿಗೆಯ ಭಾಗವನ್ನು ಪಿಸಿ**1561** ರಾಘವೇಂದ್ರರವರ ಮೂಲಕ ಸಂಗ್ರಹಿಸಿ ಅದನ್ನು ಶಿವಮೊಗ್ಗದ ವಿಧಿ ವಿಜ್ಞಾನ ವೈದ್ಯಶಾಸ್ತ್ರದ ಸಿಂಸ್ ವಿಭಾಗಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **72**ಃಪ್ರಾ.ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ **12-08-2011** ರಂದು ಪಿಸಿ ಕಿರಣ್ ಕುಮಾರ್ ಮತ್ತು ಇತರೆ ಸಿಬ್ಬಂದಿಯವರು ಮೃತಳ ಗುರುತು ಹಾಗೂ ಆರೋಪಿತರ ಪತ್ತೆಗಾಗಿ ಹಾಗೂ ಬೈಕಿನ ಮಾಲೀಕರ ಪತ್ತೆಗಾಗಿ ಹುಡುಕಾಡಿದ್ದು, ಯಾವುದೇ ಮಾಹಿತಿ ಸಿಕ್ಕಿಲ್ಲವೆಂದು ವರದಿ ಮಾಡಿರುತ್ತಾರೆ, ದಿನಾಂಕಃ **13-08-2011** ರಂದು ಶಿವಮೊಗ್ಗದ ಮಹಿಳಾ ಕುಂದುಕೊರತೆ ವಿಭಾಗ ದವರು ಅರ್ಜಿ ಸಂ. **(1) 315/2011,** ದಿನಾಂಕಃ**10-08-2011** ರಂತೆ ನಮ್ಮ ಕಛೇರಿಯ ಅರ್ಜಿ ಸಂಃ **20/2011** ರಂತೆ ಸ್ವೀಕರಿಸಿ, ಅದರ ಸಾರಾಂಶವನ್ನು ನೋಡಲಾಗಿ ಅದು ಅನಾಮಧೇಯ ಅರ್ಜಿಯಾಗಿರುತ್ತದೆ, ಅದನ್ನು ಶಿವಮೊಗ್ಗದ ಪೊಲೀಸ್ ಅಧೀಕ್ಷಕರಿಗೆ ವಿಳಾಸ ಮಾಡಿರಲಾಗಿರುತ್ತದೆ, ಅದನ್ನು ವಿಚಾರಣೆಗಾಗಿ ತನಗೆ ಉಲ್ಲೇಖಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **73**ಃ ಪ್ರಾ.ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದರಂತೆ ತಾನು ಬಲೆಗಾರು ಗ್ರಾಮಕ್ಕೆ ಬೇಟಿ ನೀಡಿ ಲೋಕೇಶ ಗೌಡ ಹಾಗೂ ಅವರ ಹೆಂಡತಿ ಶ್ರೀಮತಿ ಸುಶೀಲಮ್ಮ ಇವರನ್ನು ವಿಚಾರಣೆ ಮಾಡಿದಾಗ ಅವರ

ಬಳಿ ಒಂದು ಮಗು ಇದ್ದು, ಸದರಿ ಮಗು ತರೀಕೆರೆ ತಾಲ್ಲೂಕು ಅಮೃತಾಪುರ ವಾಸಿ ಸುರೇಶ ಇವರಿಗೆ ಸೇರಿದ್ದಾಗಿದ್ದು, ಇವರ ಹೆಂಡತಿ ಈಗ್ಗೆ 3 ತಿಂಗಳ ಹಿಂದೆ 1 ದಿನ ಮಗುವನ್ನು ಬಿಟ್ಟು ಮನೆಯಿಂದ ಹೋಗಿರುವುದರಿಂದ ಅವಳು ಸಿಗುವವರೆಗೂ ನೀವೇ ಸಾಕಿರಿ ಎಂದು ಮಗುವಿನ ತಂದೆಯಾದ ಆರೋಪಿಯಾದ ನೀನು ಮಗುವನ್ನು ತಂದು ಬಿಟ್ಟು ಹೋಗಿರುವುದಾಗಿ ತನ್ನ ಹೆಂಡತಿ ಕಾಣೆಯಾಗಿರುವ ಬಗ್ಗೆ ತರೀಕೆಗೆ ಪೊಲೀಸ್ ಠಾಣೆಯಲ್ಲಿ ಫಿರ್ಯಾದು ಕೊಟ್ಟಿರುವುದಾಗಿ ಮೌಖಿಕ ವಿಚಾರಣೆಯಿಂದ ತಿಳಿದು ಬಂದಿರುತ್ತದೆ, ಈ ಮಾಹಿತಿಯನ್ನು ಗೌಪ್ಯವಾಗಿಟ್ಟು, ಸುರೇಶನ ಪತ್ತೆಗಾಗಿ ಮತ್ತು ತರೀಕೆರೆ ಪೊಲೀಸ್ ಠಾಣೆಯಲ್ಲಿ ಯಾವುದಾದರೂ ಹೆಂಗಸು ಕಾಣೆಯಾದ ಕೇಸು ದಾಖಲಾಗಿರುವ ಬಗ್ಗೆ ವಿಚಾರಣೆ ಮಾಡಲು ಸಾಗರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಸಿಬ್ಬಂದಿಯವರಾದ ಪಿಸಿ 795 ಪ್ರಕಾಶ, ಪಿಸಿ 1542 ಜೆ ರವಿ ಹಾಗೂ ಪಿ ಸಿ 1448 ಇವರನ್ನು ವಿಶೇಷ ಕರ್ತವ್ಯಕ್ಕೆ ನೇಮಕ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 74ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿಯವರು ತರೀಕೆರೆ ಪೊಲೀಸ್ ಠಾಣೆಗೆ ಬೇಟಿ ನೀಡಿ, ತರೀಕೆರೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 113/2011 ರಲ್ಲಿ ಮಹಿಳೆ ಕಾಣೆ ಪ್ರಕರಣದ ಪ್ರಥಮ ವರ್ತಮಾನ ವರದಿ ಮತ್ತು ಪೊಲೀಸ್ ಪ್ರಕಟಣೆಯನ್ನು ತಂದು ಹಾಜರು ಪಡಿಸಿರುತ್ತಾರೆ, ಇವುಗಳನ್ನು ಪರಿಶೀಲಿಸಿದಾಗ ದಿನಾಂಕಃ 21-06-2011 ರಂದು ಬೆಳಗಿನ ಜಾವ 5.30 ಗಂಟೆ ಸಮಯದಲ್ಲಿ ತರೀಕೆರೆ ಠಾಣಾ ಸರಹದ್ದಿನ ಎಂ.ಸಿ.ಹಳ್ಳಿಯಿಂದ 25 ವರ್ಷದ ಪ್ರಾಯದ ಮಹಾಲಕ್ಷ್ಮಿ ಎನ್ನುವ ಹೆಣ್ಣು ಮಗಳು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ತನ್ನ ಹೆಣ್ಣು ಮಗುವನ್ನು ಕರೆದುಕೊಂಡು ಹೋದವಳು ಮನೆಗೂ ಬಾರದೆ ಸಂಬಂಧಿಕರ ಮನೆಗೂ ಹೋಗದೇ ಕಾಣೆಯಾಗಿರುತ್ತಾಳೆ ಎಂದು ಮಹಾಲಕ್ಷ್ಮಿಯ ತಾಯಿ ಶ್ರೀಮತಿ ಲೋಲಾಕ್ಷಿ ಗಂಡ ಶಿವರಾಮ ಇವರಿಂದ ತರೀಕೆರೆ ಪೊಲೀಸ್ ಠಾಣೆಯಲ್ಲಿ ಮೇಲ್ಕಂಡ ಪ್ರಕರಣ ದಾಖಲಿಸಿರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 75ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ದೂರಿನ ಆಧಾರದ ಮೇಲೆ ಲೋಲಾಕ್ಷಿಯವರನ್ನು ಸಂಪರ್ಕಿಸಿ, ಸುರೇಶನ ಎರಡು ಮೊಬೈಲ್ ನಂಬರ್ ಗಳಾದ 9449777218 ಹಾಗೂ 9141801705 ಇವುಗಳ

ಸಿಡಿಆರ್ ಗಳನ್ನು ದಿನಾಂಕಃ 01-06-2011 ರಿಂದ 10-08-2011 ರವರೆಗೆ ಪಡೆದು, ಒಳ ಹಾಗೂ ಹೊರ ಕರೆಗಳ ಪರಿಶೀಲನೆ ಮಾಡಿರುತ್ತೇನೆ, ಈ ನಂಬರ್ ಗಳಿಂದ ಮಾಡಲಾದ ಕರೆಗಳು ಸಾಗರ, ಆನಂದಪುರ, ತಾಳಗುಪ್ಪ, ಬಲೆಗಾರ್, ಹೆರೂರು, ಸಿದ್ದಾಪುರ ತಾಲ್ಲೂಕು ಇವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಯಾದ ಕರೆಗಳಾಗಿರುತ್ತದೆ, ಇದರ ಆಧಾರದ ಮೇಲೆ ಪಿ.ಸಿ 795, 1448, 1542 ರವರನ್ನು ಆರೋಪಿಯಾದ ನಿನ್ನ ಪತ್ತೆಗಾಗಿ ವಿಶೇಷ ಕರ್ತವ್ಯದ ಮೇಲೆ ನೇಮಕ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 76ಃ ಪ್ರಾ. ಸಾ. 37 ಶ್ರೀ ಮಾದಪ್ಪ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 20-08-2011 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರಿಸಿದ್ದು, ಪಿ.ಸಿ 795, 1448, 1542 ರವರನ್ನು ಆರೋಪಿತನಾದ ನಿನ್ನ ಪತ್ತೆಗಾಗಿ ವಿಶೇಷ ಕರ್ತವ್ಯದ ಮೇಲೆ ನೇಮಕ ಮಾಡಿದ್ದು, ಅವರು 1 ನೇ ಆರೋಪಿ ನಿನನ್ನು ಮಧ್ಯಾಹ್ನ 3.30 ರ ವೇಳೆಗೆ ಸಾಗರ ಬಸ್ ಸ್ಟ್ಯಾಂಡ್ ನಲ್ಲಿ ವಶಕ್ಕೆ ಪಡೆದು, 3.45 ರ ವೇಳೆಗೆ ತನ್ನ ಮುಂದೆ ಹಾಜರು ಮಾಡಿರುತ್ತಾರೆ, ಈ ಪ್ರಕರಣದಲ್ಲಿ 1 ನೇ ಆರೋಪಿಯಾದ ನಿನ್ನನ್ನು ಕೂಲಂಕುಷವಾಗಿ ವಿಚಾರಣೆ ಮಾಡಿದಾಗ ನೀನು 2008 ನೇ ಸಾಲಿನಲ್ಲಿ ಮಹಾಲಕ್ಷ್ಮಿಯ ಪರಿಚಯವಾದಲ್ಲಿಂದ ಹಿಡಿದು ಆಕೆಯನ್ನು ಮದುವೆಯಾದ ಬಗ್ಗೆ ಹಾಗೂ ಈ ಮಧ್ಯೆ ನಡೆದ ಘಟನೆಗಳ ಬಗ್ಗೆ ನಂತರ ದಿನಾಂಕಃ 20-06-2011 ರಂದು ಮೃತೆ ಶ್ರೀಮತಿ ಮಹಾಲಕ್ಷ್ಮಿಯನ್ನು ಕೊಲೆಗೈದ ಬಗ್ಗೆ ಸವಿವರವಾದ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ ಮೇರೆಗೆ ಪಂಚರಾಗಿ ಕೆ.ಎ. ಕುಮಾರಸ್ವಾಮಿ, ಡಿ ಆರ್ ಸಂದೇಶ ರವರನ್ನು ಬರ ಮಾಡಿಕೊಂಡು ಅವರಿಗೆ ನೋಟಿಸ್ ಜಾರಿ ಮಾಡಿ, ಅವರ ಸಮಕ್ಷಮ ಅಂಗ ಶೋಧನೆ ಮೂಲಕ ಆರೋಪಿಯನ್ನು ಸಂಜೆ 3.45 ರ ವೇಳೆಗೆ ದಸ್ತಗಿರಿಗೆ ಒಳಪಡಿಸಿರುತ್ತೇನೆ ಹಾಗೂ ಆರೋಪಿಯ ವಿವರವಾದ ಸ್ವ ಇಚ್ಛೆ ಹೇಳಿಕೆಯನ್ನು ನಿ.ಪಿ. 25 ರಂತೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 77ಃ ಪ್ರಾ.ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಯ ಸ್ವ ಇಚ್ಛೆ ಹೇಳಿಕೆಯನ್ನು ಪಡೆದುಕೊಂಡ ನಂತರ ಇಲಾಖಾ ಜೀಪ್ ನಲ್ಲಿ ಆರೋಪಿ ಮತ್ತು ಪಂಚರೊಂದಿಗೆ ಸಿಬ್ಬಂದಿಯವರಾದ ಪಿಸಿ 639, ಪಿಸಿ 795,

ಪಿಸಿ 1620 ಇವರನ್ನು ಕರೆದುಕೊಂಡು ಹೊರಟಿದ್ದು, ಆರೋಪಿಯ ಮೊದಲಿಗೆ ಸೋನಿ ಎರಿಕ್ಸನ್ ಮೊಬೈಲ್ ನ್ನು ಬಸವನಹೊಳೆ ಸೇತುವೆಯ ಹತ್ತಿರ ಹೊಡೆದು ಸಿಮ್ ತೆಗೆದು ಮುರಿದು ಹೊಳೆಗೆ ಹಾಕಿದ ಬಗ್ಗೆ ತಿಳಿಸಿದ್ದು, ಪಂಚರ ಸಮಕ್ಷಮ ಮೊಬೈಲ್ ಗಾಗಿ ಹುಡುಕಾಡಿದ್ದು ಅದು ಸಿಕ್ಕಿರುವುದಿಲ್ಲ, ನಂತರ ಹುಳ್ಳೂರು ಕೆರೆಗೆ ಹೋಗಿ ಆರೋಪಿಯಾದ ನೀನು ಮತ್ತು ಇನ್ನೊಬ್ಬ ಶಿವು ಎನ್ನುವವನು ಕೆರೆ ದಂಡೆಯ ಮಾವಿನ ಗಿಡದ ಕೆಳ ಭಾಗದಲ್ಲಿ ಶವವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದ್ದು, ಹೆಣದ ಮುಖದ ಮೇಲೆ ಕಲ್ಲು ತಂದು ಮುಖ ಜಜ್ಜಿದ ಜಾಗ ತೋರಿಸಿದ್ದು, ಅದನ್ನು ಪಂಚರ ಸಮಕ್ಷಮ ವೀಡಿಯೋಗ್ರಫಿ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 78ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಯು ಮಥುರಾ ಹೋಟೆಲ್ ನ ಎದುರುಗಡೆ ಇದ್ದ ಅಭಿನಂದನ್ ಜ್ಯುವೆಲ್ಲರ್ ಅಂಗಡಿಗೆ ಹೋಗಿ ಅಂಗಡಿಯಲ್ಲಿದ್ದವರನ್ನು ಗುರುತಿಸಿರುತ್ತೀಯ, ಆರೋಪಿಯಾದ ನೀನು ತಾನು ದಿನಾಂಕಃ 21-06-2011 ರಂದು ಬಂಗಾರದ ಕಿವಿ ಗುಂಡು 960 ಮಿಲಿ ಗ್ರಾಂ ತೂಕದ 800 ರೂಪಾಯಿಗೆ ಗಿರವಿ ಇಟ್ಟಿದ್ದು, ನಂತರ ದಿನಾಂಕಃ 23-06-2011 ರಂದು ಒಂದು ಜೊತೆ ಬೆಳ್ಳಿ ಕಾಲು ಚೈನು 80 ಗ್ರಾಂ ತೂಕದ್ದು ಎಂದು ಬರೆದು 1000 ರೂಪಾಯಿ ಹಣವನ್ನು ಪಡೆದುಕೊಂಡಿರುತ್ತೇನೆ, ಇದರ ಬಗ್ಗೆ ವಿವರ ಕೊಡಿ ಎಂದು ಕೇಳಿದ್ದು, ಸದರಿ ಅಂಗಡಿಯ ಮ್ಯಾನೇಜರ್ ಅವರಾದ ಜಿ.ಎಸ್ ಉಮೇಶರವರು ಆರೋಪಿಯು ಗಿರವಿ ಇಟ್ಟಿದ್ದ ಬಂಗಾರದ ಗುಂಡು ಮತ್ತು ಒಂದು ಜೊತೆ ಬೆಳ್ಳಿ ಕಾಲು ಚೆನ್ ಅನ್ನು ಟಿಕೆಟ್ ನಂ. 23406 ರಲ್ಲಿ ರಸೀದಿಯನ್ನು ಹಾಜರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 79ಃ ಪ್ರಾ.ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 20-08-2011 ರಂದು ಆರೋಪಿಯು ತಾನೇ ಖುದ್ದಾಗಿ ಕರೆದುಕೊಂಡು ಹೋದ ಅಭಿನಂದನ್ ಜ್ಯುವೆಲ್ಲರ್ ನಲ್ಲಿ ವಿಚಾರ ಮಾಡಿ, ಅಲ್ಲಿ ನೀನು ಇಟ್ಟಿದ್ದಂತಹ 960 ಮಿಲಿ ಗ್ರಾಂ ತೂಕದ ಬಂಗಾರದ ಗುಂಡು, ಒಂದು ಜೊತೆ ಕಾಲು ಚೈನು, ಇವೆರಡನ್ನು ಸದರಿ ಅಂಗಡಿಯ ಜಿ.ಎಸ್. ಉಮೇಶ್ ರವರು

ಹಾಜರು ಮಾಡಿದ್ದು, ಅದನ್ನು ಮಹಜರ್ ಕ್ರಮ ಜರುಗಿಸಿ ಜಪ್ತು ಮಾಡಿಕೊಂಡಿರುತ್ತೇನೆ, ಅಭಿನಂದನ್ ಜ್ಯುವೆಲ್ಲರ್ ನಲ್ಲಿ ಅದರ ಮಾಲೀಕರು ಆರೋಪಿಯು ಆಭರಣಗಳನ್ನು ಅಡವಿಟ್ಟ ಬಗ್ಗೆ ಚೀಟಿಯನ್ನು ನಿ.ಪಿ. 26 ಮತ್ತು ನಿ.ಪಿ. 27 ರಂತೆ ಹಾಜರು ಮಾಡಿದ್ದು, ಈ ಕುರಿತು ಸಾಕ್ಷಿ ಬೈರೋಲಾಲ್ ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 80ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಶಿವಮೊಗ್ಗದ ಹೊಸಮನೆ 6 ನೇ ಕ್ರಾಸ್ ನಲ್ಲಿರುವ ಮಾದೇಶ ಬಿನ್ ಲೋಕೇಶಪ್ಪಗೌಡ ಇವರ ಬಳಿಯಲ್ಲಿ ಆರೋಪಿಯಾದ ನೀನು ಮಾಂಗಲ್ಯದ ಚೈನ್ ಮತ್ತು ಬೆಳ್ಳಿ ಕಾಲುಂಗುರವನ್ನು ಇಟ್ಟುಕೊಳ್ಳಲು ನೀಡಿದ್ದು, ನೀನು ಅಲ್ಲಿಗೆ ತಮ್ಮನ್ನು ಮತ್ತು ಪಂಚರನ್ನು ಕರೆದುಕೊಂಡು ಹೋಗಿ ಅಲ್ಲಿದ್ದ ಮಾದೇಶರವರನ್ನು ಮಾಂಗಲ್ಯದ ಚೈನ್ ಮತ್ತು ಬೆಳ್ಳಿ ಕಾಲುಂಗುರ ಕೇಳಿದಾಗ ಅವರು ನೀನು ಅದನ್ನು ನೀಡಿರುವುದನ್ನು ಒಪ್ಪಿಕೊಂಡು ಸದರಿ ಮಾಂಗಲ್ಯದ ಚೈನ್ ಮತ್ತು ಬೆಳ್ಳಿ ಕಾಲುಂಗುರವನ್ನು ತನ್ನ ಅಣ್ಣ ಶಿವಮೂರ್ತಿ ಬಲೆಗಾರ್ ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 81ಃ ಪ್ರಾ.ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅಲ್ಲಿಂದ ಬಲೆಗಾರಿಗೆ ಆರೋಪಿಯಾದ ನೀನು ತಮ್ಮನ್ನು ಕರೆದುಕೊಂಡು ಹೋಗಿದ್ದು, ಬಲೆಗಾರಿನ ಲೋಕೇಶಪ್ಪ ಬಿನ್ ಮಲ್ಲಪ್ಪಗೌಡ ಇವರು ತಮ್ಮ ಹೆಂಡತಿ ಮಕ್ಕಳೊಂದಿಗೆ ವಾಸವಾಗಿರುವ ಮನೆ ನಂಬರ್ 12 ರಲ್ಲಿ ಹೋಗಿ ಪಂಚರಸಮಕ್ಷಮ ಮನೆಯಲ್ಲಿದ್ದ ಲೋಕೇಶಪ್ಪಗೌಡ, ಸುಶೀಲಮ್ಮ, ಹಾಗೂ ಮಾದೇಶರವರಿದ್ದು, ನಿನಗೆ ತೋರಿಸಿ ಆತನು ನೀಡಿದ ಸ್ವ ಇಚ್ಛೆ ಹೇಳಿಕೆಯಂತೆ ಪ್ರಶ್ನಿಸಿದಾಗ ದಿನಾಂಕಃ 20-06-2011 ರ ರಾತ್ರಿ ತರೀಕೆರೆ ತಾಲ್ಲೂಕು ಎಂ.ಸಿ ಹಳ್ಳಿ ಬಾಡಿಗೆ ಮನೆಯಲ್ಲಿ ಮಹಾಲಕ್ಷ್ಮಿಯನ್ನು ಕೊಲೆ ಮಾಡಿ ಅವಳ ಹೆಣದ ಮೇಲಿದ್ದ ಆಭರಣಗಳನ್ನು ಬಿಚ್ಚಿಕೊಂಡು ಆಕೆಯ ಹೆಣವನ್ನು ಜೋಗ್ ಫಾಲ್ಸ್ ಗೆ ಹಾಕಲು ತನ್ನ ಬೈಕ್ ಕೆ ಎ 14 ಯು 5313 ರಲ್ಲಿ ಆರೋಪಿ ನೀನು ಶಿವು ಸೇರಿಕೊಂಡು ಹೆಣವನ್ನು ಬೈಕ್ ನಲ್ಲಿ ಹಾಕಿಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯೆ ಸಾಗರ ತಾಲ್ಲೂಕು ಹುಳ್ಳೂರು ಕೆರೆಯ ಹತ್ತಿರ ಬೈಕ್ ನ ಪೆಟ್ರೋಲ್ ರಿಸರ್ವ್ ಗೆ ಬಂದಿದ್ದರಿಂದ ಬೈಕನ್ನು ಹುಳ್ಳೂರು ಕೆರೆಯ ಹತ್ತಿರ ನಿಲ್ಲಿಸಿ, ಹೆಣವನ್ನು ಬೈಕ್ ನಿಂದ ಕೆಳಗೆ ಇಳಿಸಿ, ಹೆಣದ ಮುಖದ ಗುರುತು

ಸಿಗಬಾರದೆಂದು ಕಲ್ಲಿನಿಂದ ಮುಖವನ್ನು ಜಜ್ಜಿ ಕಲ್ಲನ್ನು ಹೆಣದ ಎದೆಯ ಮೇಲೆ ಇಟ್ಟು, ತಾವು ತಂದಿದ್ದ ನೈಲಾನ್ ಹಗ್ಗದಿಂದ ಶವವನ್ನು ಕಟ್ಟಿ ಶವವನ್ನು ಕೆರೆಯಲ್ಲಿ ಹಾಕಿ ಹೋಗಿರುತ್ತಾರೆ ಎಂದು ಗೊತ್ತಾಯಿತು ಎಂದು ಸುಶೀಲಮ್ಮ, ಲೋಕಪ್ಪಗೌಡ ಮತ್ತು ಮಾದೇಶರವರು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 82ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲನ್ನು ಮಾದೇಶನ ಮುಖಾಂತರ ಬಲೆಗಾರಿಗೆ ಕಳುಹಿಸಿದ್ದು, ಸದರಿ ವಾಹನ ರಕ್ತವಾದ ಬಗ್ಗೆ ವಿಚಾರಿಸಿದಾಗ ಆರೋಪಿಯಾದ ನೀನು ತನ್ನ ಸ್ನೇಹಿತನೊಂದಿಗೆ ಕುರಿ ಕಡಿದು ಸದರಿ ಗಾಡಿಯಲ್ಲಿ ಹಾಕಿಕೊಂಡು ಬಂದಿರುವುದಾಗಿ ಮಾದೇಶನು ತಿಳಿಸಿರುತ್ತಾನೆ, ಸದರಿ ಮೋಟಾರು ಸೈಕಲನ್ನು ಹಾಜರು ಮಾಡುವಂತೆ ಕೋರಿದ್ದು, ಮಾದೇಶನು ಮೋಟಾರು ಸೈಕಲ್ ನಂ. ಕೆಎ 14 ಯು 5313 ನ್ನು ಹಾಜರು ಮಾಡಿರುತ್ತಾನೆ, ಹಾಗೂ ಮಾದೇಶನು ಅಲ್ಲಿ ತಾಳಿ ಸರ ಮತ್ತು ಕಾಲುಂಗುರವನ್ನು ಹಾಜರು ಮಾಡಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 83ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅವುಗಳನ್ನು ಪಂಚರ ಸಮಕ್ಷಮ ನಿ.ಪಿ. 22 ರಂತೆ ಮಹಜರ್ ಜರುಗಿಸಿ ಅಮಾನತ್ತುಪಡಿಸಿ ಕೊಂಡಿದ್ದು, ಆ ಕಾಲಕ್ಕೆ ಫೋಟೋಗ್ರಫಿ ಮತ್ತು ವೀಡಿಯೋಗ್ರಫಿ ಎರಡನ್ನು ಮಾಡಲಾಗಿರುತ್ತದೆ, ನಂತರ ಮಾದೇಶ, ಲೋಕಪ್ಪಗೌಡ ಮತ್ತು ಸುಶೀಲಮ್ಮ ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ, ಆ ಸಮಯದಲ್ಲಿ ಛಾಯಾಚಿತ್ರವನ್ನು ನಿ.ಪಿ.66 ತೆಗೆಯಲಾಗಿರುತ್ತದೆ, ನಿ.ಪಿ. 22 ರ ಮೂಲಕ ಜಫ್ತು ಮಾಡಿದ ಮಾಂಗಲ್ಯದ ಸರ, ಬೆಳ್ಳಿ ಕಾಲುಂಗುರ ಮತ್ತು ಮೋಟಾರು ಬೈಕನ್ನು ಈಗಾಗಲೇ ಎಂ.ಓ.7 ಮತ್ತು ಎಂ.ಓ.8 ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 84ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮೋಟಾರು ಸೈಕಲ್ ನಂಬರ್ ಕೆಎ.14/ಯು 5313 ರ ಬಿ. ಎಕ್ಸ್ ಟ್ರಾಕ್ಟ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.67 ಎಂದು ಗುರುತಿಸಲಾಯಿತು. ದಿಃ 20.08.2011 ರಂದು ಮೃತ ಮಹಾಲಕ್ಷ್ಮಿಯು ಹೆಣ್ಣು ಮಗಳಿಗೆ ಜನ್ಮ ನೀಡಿದ ಕುರಿತಂತೆ ಪಿ.ಹೆಚ್.ಸಿ ಎಂ.ಸಿ. ಹಳ್ಳಿ ವೈದ್ಯರಿಂದ ದೃಢೀಕರಣ ಪತ್ರ ನಿ.ಪಿ.21 ರಂತೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ 85ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ 20.08.2011 ರಂದು 1 ನೇ ಆರೋಪಿಯಾದ ನಿನ್ನ ಸ್ವಇಚ್ಛಾ ಹೇಳಿಕೆಯನ್ನು ನಿ.ಪಿ.25 ರಂತೆ ಪಡೆದುಕೊಂಡಿರುತ್ತೇನೆ, ಅದೇ ದಿನದಂದು ನಿ.ಪಿ.25 ರಂತೆ 1 ನೇ ಆರೋಪಿಯು ಹೇಳಿದ ಸ್ವಇಚ್ಛಾ ಹೇಳಿಕೆಯಂತೆ ತಾನು, ಹಾಗೂ ಪಂಚರೊಂದಿಗೆ 1 ನೇ ಆರೋಪಿಯಾದ ನೀನು ಕರೆದುಕೊಂಡು ಹೋದ ಚಿಕ್ಕಮಗಳೂರು ಜಿಲ್ಲೆಯ ಎಂ.ಸಿ. ಹಳ್ಳಿ ಹೊಸಬಡಾವಣೆಯ ಗ್ರಾಮದ ಟಿ.ಡಿ. ರಾಮೇಗೌಡ ಇವರ ಮಾಲೀಕತ್ವದ ಮನೆಯಲ್ಲಿ ವಾಸವಿದ್ದ ನರೇಂದ್ರನ ಮನೆಗೆ ಹೋಗಿ ಅಲ್ಲಿ ಕೃತ್ಯ ಸ್ಥಳವನ್ನು ತೋರಿಸಿರುತ್ತಾನೆ, ಸದರಿ ಕೃತ್ಯ ಸ್ಥಳವನ್ನು ನಿ.ಪಿ.16 ರಂತೆ ಪಂಚರ ಸಮಕ್ಷಮ ಮಹಜರ್ ಮಾಡಿರುತ್ತೇನೆ, ನಿ.ಪಿ.16 ರ ಕಾಲಕ್ಕೆ ಪೋಟೋಗಳನ್ನು ನಿ.ಪಿ.17 ರಿಂದ ನಿ.ಪಿ.19 ರಂತೆ ತೆಗೆದಿದ್ದು, ಅದೇ ದಿನ ಅಂದರೆ ದಿಃ 20.08.2011 ರಂದು ಸಾಕ್ಷಿದಾರರಾದ ಚಾಸಾ.19, ಚಾಸಾ.27, ಚಾಸಾ.28, ಚಾಸಾ.29, ಚಾಸಾ.31, ಚಾಸಾ.32, ಚಾಸಾ.33, ಚಾಸಾ.34, ಚಾಸಾ.35, ಚಾಸಾ.36 ಇವರುಗಳ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ, ಚಾಸಾ.34 ರವರು ನಿ.ಪಿ.29 ರಂತೆ, ಚಾಸಾ.35 ರವರು ತನ್ನ ಮುಂದೆ ನಿ.ಪಿ.30 ರಂತೆ, ಚಾಸಾ.36 ರವರು ತನ್ನ ಮುಂದೆ ನಿ.ಪಿ.31 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 86ಃ ಪ್ರಾ. ಸಾ. 37 ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ 21.08.2011 ರಂದು 2 ನೇ ಆರೋಪಿ ಶಿವು ಈತನನ್ನು ದಸ್ತಗಿರಿ ಮಾಡಿ

ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು, ಸದರಿ ಹೇಳಿಕೆಯ ಆಧಾರದ ಮೇಲೆ ಸದರಿ ಆರೋಪಿಯು ಆತನ ಮನೆಗೆ ಕರೆದುಕೊಂಡು ಹೋಗಿ ಕೃತ್ಯ ಸ್ಥಳವನ್ನು ತೋರಿಸಿ, ಮೃತ ಮಹಾಲಕ್ಷ್ಮಿ ಅವಳ ಬಲಗೈಯಲ್ಲಿ ಇದ್ದ ಒಂದು ಹರಳಿನ ಉಂಗುರವನ್ನು ತಾನು ಬಿಚ್ಚಿಕೊಂಡಿದ್ದೇನೆಂದು ಹೇಳಿ ತಾನು ಧರಿಸಿದ ಪ್ಯಾಂಟ್ ನಿಂದ ಅದನ್ನು ತೆಗೆದು ತೋರಿಸಿ ಹಾಜರು ಪಡಿಸಿದ ಮೇರೆಗೆ ಅದನ್ನು ನಾನು ಪಂಚರ ಸಮಕ್ಷಮ ರಾತ್ರಿ 7.35 ಗಂಟೆಗೆ ನಿ.ಪಿ.23 ಮಹಜರ್ ನಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ, ತಾನು ಅಮಾನತ್ತು ಪಡಿಸಿಕೊಂಡಿದ್ದ ಉಂಗುರವನ್ನು ಮು.ಮಾ.9 ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ **87**ಃ ಪ್ರಾ. ಸಾ. **37** ಶ್ರೀ ಮಾದಪ್ಪ ರವರು ತಮ್ಮ ಮುಂದುವರೆದ ಸದರಿ 2 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.68 ಎಂದು ಗುರುತಿಸಲಾಯಿತು, ದಿಃ 21.08.2011. ರಂದು ಸಾಕ್ಷಿದಾರರಾದ ಚಾಸಾ.48, ಚಾಸಾ.16, ಚಾಸಾ.30, ಚಾಸಾ.37, ಚಾಸಾ.38, ಚಾಸಾ.40, ಚಾಸಾ.41, ಚಾಸಾ.42, ಚಾಸಾ.43 ಇವರುಗಳ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ, ಚಾಸಾ.37 ರವರು ತನ್ನ ಮುಂದೆ ನಿ.ಪಿ.32 ರಂತೆ, ಚಾಸಾ.38 ರವರು, ನಿ.ಪಿ.33 ರಂತೆ, ಚಾಸಾ.39 ರವರು, ನಿ.ಪಿ.34 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ, ನಂತರ ಆರೋಪಿತರಿಬ್ಬರ ಬಂಧನ ಪ್ರಕ್ರಿಯೆಯನ್ನು ಅನುಸರಿಸಿ ಅವರನ್ನು ರಿಮಾಂಡ್ ಯಾದಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **88**ಃ ಪ್ರಾ.ಸಾ.**37** ಶ್ರೀ ಮಾದಪ್ಪ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನಿಖೆಯನ್ನು ಮುಂದುವರೆಸಿ ದಿಃ 22.08.2011 ರಂದು ಚಾಸಾ.16, ಚಾಸಾ.30, ಚಾಸಾ.44, ಚಾಸಾ.45 ಇವರುಗಳ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ, ಈ ಪ್ರಕರಣದಲ್ಲಿ ನಿ.ಪಿ.41 ಪಿ.ಎಂ. ವರದಿ, ನಿ.ಪಿ.42 ಎಫ್. ಎಸ್. ಎಲ್. ವರದಿ, ನಿ.ಪಿ.43 ಮಹಲಕ್ಷ್ಮಿ ಇವರ ಸಾವಿನ ಕುರಿತು ವೈದ್ಯರ ಅಂತಿಮ ಅಭಿಪ್ರಾಯ, ನಿ.ಪಿ.44 ಇನ್ನೊಂದು ಎಫ್. ಎಸ್.ಎಲ್. ವರದಿ ಇವುಗಳನ್ನು ಸ್ವೀಕರಿಸಿ ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ, ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮೃತಳ ಮೇಲಿನ ಬಟ್ಟೆ ಮತ್ತು ಲೂನವನ್ನು ಇವುಗಳನ್ನು ಮು.ಮಾ.1 ರಿಂದ 5 ಎಂದು ಗುರುತಿಸಲಾಗಿದೆ, ತನಿಖಾ ಕಾಲದಲ್ಲಿ ವೈದ್ಯರು ಸಂಗ್ರಹಿಸಿಕೊಟ್ಟ ಮೃತಳ ದೇಹದ ಭಾಗದ ಅಂಗವನ್ನು ಡಿ.ಎನ್.ಎ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **89**ಃ **ಪ್ರಾ.ಸಾ.37** ಶ್ರೀ ಮಾದಪ್ಪ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಪ್ರಕರಣವು ತನಿಖಾ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದ್ದು ಎಂದು ಕಂಡು ಬಂದಿದ್ದರಿಂದ ಸದರಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ಸಂಪೂರ್ಣ ಕಡತವನ್ನು ತರೀಕೆರೆ ಪೊಲೀಸರಿಗೆ ಮಾನ್ಯ ನ್ಯಾಯಾಲಯದ ಅನುಮತಿಯನ್ನು ಪಡೆದು ನಮ್ಮ ಮೇಲಾಧಿಕಾರಿಗಳ ಮುಖಾಂತರ ದಿಃ 07.09.2011 ರಂದು ಕಡತವನ್ನು ಹಸ್ತಾಂತರಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **90**ಃ **ಪ್ರಾ.ಸಾ.38** ಶ್ರೀ ಶ್ರೀನಿವಾಸ ಇವರು ತಮ್ಮ ಸಾಕ್ಷ್ಯದಲ್ಲಿ ನಿ.ಪಿ.3 ಮಹಜರ್ ಲ್ಲಿ ನಿ.ಪಿ.3(ಇ) ರಂತೆ ಇರುವ ಸಹಿಯನ್ನು ತಾನು 10 ವರ್ಷಗಳ ಹಿಂದೆ ಉಳ್ಳೂರಿನ ಕೆರೆಯ ಹತ್ತಿರ ಮಾಡಿರುತ್ತೇನೆ, ಆಗ ಸಮಯ ಮಧ್ಯಾಹ್ನದ ಹೊತ್ತು ಆಗಿತ್ತು, ಜನ ಗುಂಪಾಗಿ ಕೂಡಿದ್ದರಿಂದ ತಾನು ಅಲ್ಲಿಗೆ ಹೋಗಿರುತ್ತೇನೆ, ತಾನು ಅಲ್ಲಿ ಹೋಗಿ ನೋಡಿದಾಗ ಅಲ್ಲಿ ಒಂದು ಮೃತ ದೇಹ ಕೆರೆಯಲ್ಲಿ ಇತ್ತು, ಸದರಿ ಶವವನ್ನು ಊರಿನಲ್ಲಿ ಇದ್ದವರು ನೀರಿನಿಂದ ಎತ್ತಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **91**ಃ ಪ್ರಾ. ಸಾ. **38** ಶ್ರೀ ಶ್ರೀನಿವಾಸ ಇವರು ತಮ್ಮ ಸಾಕ್ಷ್ಯದಲ್ಲಿ ನಿ.ಪಿ.10 ದಾಖಲೆಯು ಶವ ಪಂಚನಾಮೆಯಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.10(ಡಿ) ಎಂದು ಗುರುತಿಸಲಾಯಿತು, ತಾನು ಮೃತ ದೇಹವನ್ನು ನೋಡಿದ್ದು, ಅದು ಸಂಪೂರ್ಣ ಊತವಾಗಿತ್ತು ಎಂದು

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 92ಃ ಪ್ರಾ.ಸಾ.40 ಶ್ರೀ ಪ್ರಕಾಶ್ ಇವರು ತಮ್ಮ ಸಾಕ್ಷ್ಯದಲ್ಲಿ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 210/2011 ಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಅನಾಮದೆಯ ಮಹಿಳಾ ಮೃತ ದೇಹದ ಗುರುತು ಪತ್ತೆಗಾಗಿ ತನ್ನನ್ನು ಹಾಗೂ ಪಿ.ಸಿ ಕಿರಣ್ ಕುಮಾರ್ ಮತ್ತು ಪಿ.ಸಿ ರವಿ ಎಂಬುವವರನ್ನು ನೇಮಕ ಮಾಡಿದ್ದು, ಅದರಂತೆ ದಿಃ 20.08.2011 ರಂದು ಠಾಣೆಯಿಂದ ಹೊರಟು ಸಾಗರ ಟೌನ್ ಬಿ.ಹೆಚ್ ರಸ್ತೆ ಲೋಹಿಯ ನಗರ, ಹೆಲಿಪ್ಯಾಡ್, ಕರ್ಕಿ ಕೊಪ್ಪ, ವರದ ಹಳ್ಳಿ ಮುಂತಾದ ಕಡೆಗಳಲ್ಲಿ ಸಂಚರಿಸಿ ಬಾತ್ಮಿದಾರರಿಂದ ಮಾಹಿತಿ ಪಡೆದಿದ್ದು ಹಾಗೂ ಶವದ ಗುರುತು ಪರಿಚಯದ ಬಗ್ಗೆ ನೋಟೀಸ್ ನ್ನು ಜಾರಿಗೊಳಿಸಿದ್ದು, ಅದೇ ದಿನ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ವರದಹಳ್ಳಿಯಿಂದ ವಾಪಸ್ಸು ಸಾಗರದ ಖಾಸಗಿ ಬಸ್ ನಿಲ್ದಾಣಕ್ಕೆ ಬಂದಾಗ ಜೋಗದ ಕಡೆಗೆ ಹೋಗುವ ಬಸ್ ನಿಲ್ಲುವ ಸ್ಥಳದಲ್ಲಿ ಯಾರೋ ಒಬ್ಬ ವ್ಯಕ್ತಿ ತಮ್ಮನ್ನು ನೋಡಿ ತನ್ನ ಇರುವಿಕೆಯನ್ನು ಮರೆಮಾಚಿಕೊಳ್ಳಲು ಪ್ರಯತ್ನ ಪಡುತ್ತಿರುವುದನ್ನು ಗಮನಿಸಿ ಅನುಮಾನ ಬಂದಿದ್ದರಿಂದ ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ತನ್ನ ಹೆಸರು ಸುರೇಶ, ವಾಸ ಅಮೃತಹಳ್ಳಿ, ತರೀಕೆರೆ ತಾಃ, ಚಿಕ್ಕಮಗಳೂರು ಜಿಲ್ಲೆ ಎಂದು ತಿಳಿಸಿದ್ದು, ಸದರಿ ವ್ಯಕ್ತಿಯನ್ನು ಮಧ್ಯಾಹ್ನ 3.45 ಗಂಟೆಗೆ ಕರೆದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ವರದಿಯೊಂದಿಗೆ ಹಾಜರು ಪಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 93ಃ ಪ್ರಾ. ಸಾ. 40 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾನು ಆ ದಿನ ಆರೋಪಿಯನ್ನು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ ಬಗ್ಗೆ ವರದಿ ನಿ.ಪಿ.70 ರಂತೆ ನೀಡಿದ್ದು, ತಾನು ಆ ದಿನ ಸಾಗರ ಖಾಸಗಿ ಬಸ್ ನಿಲ್ದಾಣದಲ್ಲಿ ಜೋಗ ಕಡೆ ಹೋಗುವ ಬಸ್ ನಿಲ್ಲುವ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನುಮಾನಸ್ಪದವಾಗಿ ನಿಂತಿದ್ದು, ಆತನನ್ನು ನಾವು ಹಿಡಿದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ ವ್ಯಕ್ತಿ ಈಗ ನ್ಯಾಯಾಲಯ ಮುಂದಿರುವ ಆರೋಪಿ ನೀನೇ

ಆಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 94ಃ ಪ್ರಾ. ಸಾ. 41 ಶ್ರೀ ಕಿರಣ್ ಕುಮಾರ್ ಪಿಸಿ 1448 ಪೇಪರ್ ಟೌನ್ ಪೋಲಿಸ್ ಠಾಣೆ ಭದ್ರಾವತಿ, ಇವರು ತಮ್ಮ ಸಾಕ್ಷ್ಯದಲ್ಲಿ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರು ಮೊಕದ್ದಮೆ ಸಂಖ್ಯೆ 210/2011 ಕ್ಕೆ ಸಂಬಂಧಿಸಿದಂತೆ ದಿಃ 21.08.2011 ರಂದು ಸದರಿ ಮೊಕದ್ದಮೆಯ 2 ನೇ ಶಿವು @ ಶಿವಕುಮಾರ್ ಬಿನ್ ಕೃಷ್ಣಮೂರ್ತಿ ಇವನ ಪತ್ತೆಗಾಗಿ ತನ್ನನ್ನು, ಪಿ.ಸಿ ಸಂತೋಷ್ ಕುಮಾರ್ ಮತ್ತು ಪಿ.ಸಿ ಚೇತನ್ ಕುಮಾರ್ ಇವರನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಿರುತ್ತಾರೆ, ಅದರಂತೆ ಆ ದಿನ ಬೆಳಿಗ್ಗೆ ಠಾಣೆಯಿಂದ ಹೊರಟು ಕುಗ್ವೇ, ಸಿರಿವಂತೆ, ಹಾಲಳ್ಳಿ, ತಾಳಗುಪ್ಪ ಕಡೆಗಳಲ್ಲಿ ಸಂಚರಿಸಿ ಅಲ್ಲಿ ಬಾತ್ಮಿದಾರರು, ಜೋಗ ಕಡೆ ಹೋಗುವ ಬಸ್ ನ ಚಾಲಕರನ್ನು ಮತ್ತು ನಿರ್ವಾಹಕರನ್ನು ಭೇಟಿ ಮಾಡಿ ಅವರಿಗೆ ವಿಷಯ ತಿಳಿಸಿ, 2 ನೇ ಆರೋಪಿಯ ಶಿವುನ ಚಹರೆಗಳನ್ನು ತಿಳಿಸಿ ವಿಚಾರ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 95ಃ ಪ್ರಾ. ಸಾ. 41 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅಲ್ಲಿಂದ ಗುಡ್ಡೆಮನೆ ಚೂರಿಕಟ್ಟೆಕಡೆ ಹೋಗಿದ್ದು, ಅಲ್ಲಿ ಹೊನ್ನಾವರ ರಸ್ತೆಯಲ್ಲಿ ಇರುವ ಒಂದು ಕಿರಾಣಿ ಅಂಗಡಿಯ ಹತ್ತಿರ ಒಬ್ಬ ವ್ಯಕ್ತಿ ನಿಂತಿದ್ದು, ಅವನ ಚಹರೆಯು 2 ನೇ ಆರೋಪಿಯ ಶಿವುನ ಚಹರೆಗೆ ಹೋಲಿಕೆಯಾಗಿದ್ದು, ತಮ್ಮನ್ನು ನೋಡಿ ಆತನು ಓಡಿ ಹೋಗಲು ಪ್ರಯತ್ನಿಸಿದ್ದು, ತಾವು 3 ಜನ ಹೋಗಿ ಆತನನ್ನು ಹಿಡಿದುಕೊಂಡು, ಆತನ ಹೆಸರು, ವಿಳಾಸ ಕೇಳಲಾಗಿ, ಆತನು ತನ್ನ ಹೆಸರು ಶಿವು @ ಶಿವಕುಮಾರ್ ಬಿನ್ ಕೃಷ್ಣಮೂರ್ತಿ, ವಾಸ ಚೂರಿಕಟ್ಟೆ, ತಮಿಳು ಜನಾಂಗ ಎಂದು ಹೇಳಿರುತ್ತಾನೆ, ಸದರಿ ಮೊಕದ್ದಮೆಯಲ್ಲಿ ಇರುವ 2 ನೇ ಆರೋಪಿ ಶಿವು ಆತನೇ ಎಂದು ಖಾತರಿಯಾದ ನಂತರ ಆತನನ್ನು ಸಂಜೆ 5.00 ಗಂಟೆಗೆ ಹಿಡಿದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರ ಮುಂದ ಸಂಜೆ 5.45 ಗಂಟೆಗೆ ಆತನನ್ನು ವರದಿಯೊಂದಿಗೆ ಹಾಜರು ಪಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 96ಃ ಪ್ರಾ. ಸಾ. 41 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾನು ಆ ದಿನ ಸದರಿ ಮೊಕದ್ದಮೆಯ 2 ನೇ ಆರೋಪಿಯನ್ನು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಿದ ಬಗ್ಗೆ ನಿ.ಪಿ.71 ರಂತೆ ವರದಿ ನೀಡಿದ್ದು, ತಾವು ಆ ದಿನ ಚೂರಿಕಟ್ಟೆ ಹತ್ತಿರ ಹೊನ್ನಾವರ ರಸ್ತೆಯಲ್ಲಿ ಇರುವ ಒಂದು ಕಿರಾಣಿ ಅಂಗಡಿಯ ಹತ್ತಿರ ಇರುವ ವ್ಯಕ್ತಿಯನ್ನು ನೋಡಿದ್ದು, ಆತನನ್ನು ಹಿಡಿದುಕೊಂಡು ಸಾಗರ ಗ್ರಾಮಾಂತರ ವೃತ್ತ ನಿರೀಕ್ಷಕರವರಲ್ಲಿ ಹಾಜರು ಪಡಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ ವ 97ಃ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಏನೂ ಇರುವುದಿಲ್ಲ.

ಪ್ರಶ್ನೆಃ 98ಃ ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಃ

ಉತ್ತರಃ ಮಾಡಿಸುವುದಿಲ್ಲ.

ಆರೋಪಿತನಿಗೆ ಅವನು ತಿಳಿದ ಭಾಷೆಯಲ್ಲಿ ಹೇಳಿಕೆಯನ್ನು ಓದಿ ಹೇಳಲಾಗಿ ಅದರಂತೆ ಆರೋಪಿತನ ಹೇಳಿಕೆಯನ್ನು ದಾಖಲು ಮಾಡಲಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 17 ನೇ ಸೆಪ್ಟಂಬರ್ ಮಾಹೆ 2021

ಸಹಿ
2 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಹಿ
ಆರೋಪಿತನ ಸಹಿ.